# ಲಿಕುಚಕುಲಪಂಡಿತಾಚಾರ್ಯ ಪರೀಕ್ಷೆ –೨೦೨೪ –೨೦೨೫

## ಪ್ರಶ್ನೋತ್ತರಾವಳೀ

**ಲೆವೆಲ್ - 1** Rev- Oct 6 2024

# (1 ನೇಯ ಬಾರಿ ಲಿಕುಚ ಪರೀಕ್ಷೆಯಲ್ಲಿ ಭಾಗವಹಿಸುವವರಿಗೆ)

# ಮಧ್ವವಿಜಯ

| ಸಂಖ್ಯೆ | ಪ್ರಶ್ನೆ | ಉತ್ತರ | ಸರ್ಗ | ಶ್ಲೋಕ | ಕಥಾಭಾಗ |
|---|---|---|---|---|---|
| ೧. | ವಾಯುದೇವರ ಮೂರು ಅವತಾರಗಳು ಯಾವುವು ? | ಹನುಮ ,ಭೀಮ,ಮಧ್ವ | | | |
| ೨. | ಮಧ್ವಾಚಾರ್ಯರ ನಾಮಕರಣದ ಹೆಸರೇನು ? | ವಾಸುದೇವ | | | |
| ೩. | ಮಧ್ವಾಚಾರ್ಯರ ಸಂನ್ಯಾಸಾಶ್ರಮದ ಹೆಸರೇನು? | ಪೂರ್ಣಪ್ರಜ್ಞ | | | |
| ೪. | ಮಧ್ವಾಚಾರ್ಯರಿಗೆ ವೇದಾಂತಪೀಠದಲ್ಲಿ ಪಟ್ಟಾಭಿಷೇಕ ಆದಾಗ ಬಂದ ಹೆಸರೇನು ? | ಆನಂದತೀರ್ಥ | .. | .. | ಪರಿಚಯ |
| ೫. | ಮಧ್ವವಿಜಯವನ್ನು ರಚಿಸಿದವರಾರು ? | ನಾರಾಯಣ ಪಂಡಿತಾಚಾರ್ಯರು | .. | .. | .. |
| ೬. | ಮಧ್ವವಿಜಯಕ್ಕೆ ಗ್ರಂಥಕರ್ತೃಗಳೇ ಬರೆದ ವ್ಯಾಖ್ಯಾನ ಯಾವುದು? | ಭಾವ ಪ್ರಕಾಶಿಕಾ | .. | .. | .. |
| ೭. | ಸಮಗ್ರ ಮಧ್ವವಿಜಯದ ಸಾರವನ್ನು ಪ್ರತಿನಿತ್ಯ ಪಾರಾಯಣ ಮಾಡಲು ಅನುಕೂಲವಾಗುವ ನಾರಾಯಣ ಪಂಡಿತಾಚಾರ್ಯರ ಮತ್ತೊಂದು ಗ್ರಂಥ ಯಾವುದು ? | ಪ್ರಮೇಯನವಮಾಲಿಕಾ | .. | .. | .. |
| ೮. | ನಾರಾಯಣ ಪಂಡಿತಾಚಾರ್ಯರು ಮಧ್ವ ವಿಜಯವನ್ನು ರಚಿಸುವ ಉದ್ದೇಶವೇನು ? | ಗುರುಭಕ್ತಿಯಿಂದ ಹುಟ್ಟುವ ಹರಿಭಕ್ತಿಗಾಗಿ | ೦೧ | ೦೫ | .. |
| ೯. | ಮಹಾತ್ಮರ ಚರಿತ್ರೆಯನ್ನು ಹೇಳಿದರೆ ಆಗುವ ಲಾಭವೇನು? | ಮನ:ಶುದ್ಧಿ | ೦೧ | ೦೭ | .. |
| ೧೦. | ಹನುಮಂತ ಗಂದಮಾಧನ ಪರ್ವತವನ್ನು ತರುವಾಗ ಪಟ್ಟ ಪ್ರಯತ್ನಕ್ಕಿಂತಲೂ ಹೆಚ್ಚು ಪ್ರಯತ್ನ , ಜಾಗ್ರತೆ ವಹಿಸಿದ್ದು ಯಾವಾಗ ? | ರಾಮಪೂಜೆಗಾಗಿ ಹೂವನ್ನು ತರುವಾಗ | ೦೧ | ೧೯ | .. |
| ೧೧. | ಹನುಮಂತನ ಸೇವೆಗೆ ಶ್ರೀರಾಮ ನೀಡಿದ ಉಡುಗೊರೆ ಏನು? | ಸಹಭೋಗ (ಬ್ರಹ್ಮಪದವಿ) | ೦೧ | ೨೩ | .. |
| ೧೨. | ಈಗಲೂ ಹನುಮಂತ ರಾಮಕಥಾ ಕೀರ್ತನೆಯಲ್ಲಿ ಮುಳುಗಿರುವ ಸ್ಥಳ ಯಾವುದು? | ಕಿಂಪುರುಷ | ೦೧ | ೨೭ | .. |
| ೧೩. | ಭೀಮಸೇನ ಮಗುವಾಗಿದ್ದಾಗ ತಾಯಿಯಾದ ಕುಂತಿಯ ಕೈಯಿಂದ ಜಾರಿದಾಗ ಏನಾಯಿತು ? | ಶತಶೃಂಗ ಪರ್ವತವೇ ಸೀಳಿತು | ೦೧ | ೨೯ | .. |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ | |
|---|---|---|---|---|---|
| ೧೪. | ಸೌಗಂಧಿಕಾ ಪುಷ್ಪವನ್ನು ತರುವ ಸಂದರ್ಭದಲ್ಲಿ ಭೀಮಸೇನ ಯಾರನ್ನು ಸಂಹರಿಸಿದ್ದು ? | ಮಣಿಮಂತನೆ ಮೊದಲಾದ ಕ್ರೋಧವಶರನ್ನು | ೦೧ | ೩೯ | .. |
| ೧೫. | ಮಹಾಭಾರತ ಯುದ್ಧದಲ್ಲಿ ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನಾಧಿಗಳನ್ನು ಕೊಂದವ ಯಾರು? | ಭೀಮಸೇನ | ೦೧ | ೪೨ | .. |
| ೧೬. | ಕಲಿಯುಗದಲ್ಲಿ ಭಗವಂತನಿಗೆ ಅವತಾರವಿಲ್ಲದ ಕಾರಣ ಕಲಿಯುಗದ ರಕ್ಷಣೆಗಾಗಿ ನಾರಾಯಣ ಯಾರನ್ನು ಅವತರಿಸಲು ಆದೇಶಿಸಿದ ? | ಸರ್ವಜ್ಞರಾದ ಮುಖ್ಯಪ್ರಾಣದೇವರನ್ನು | ೦೨ | ೦೨ | ಮುಖ್ಯಪ್ರಾಣದೇವರ ೩ನೇ ಅವತಾರ |
| ೧೭. | ಅನಂತಾಸನದೇವರು ಒಬ್ಬ ಅಕುಶಲನಲ್ಲಿ ಪ್ರವೇಶಿಸಿ ಧ್ವಜಸ್ತಂಭದ ತುದಿಯಲ್ಲಿ ನಿಂತು ನೀಡಿದ ಸಂದೇಶವೇನು ? | ಮಹಾಪುರುಷರ ಅವತಾರವಾಗಲಿದೆ | ೦೨ | ೦೮ | .. |
| ೧೮. | ಮುಖ್ಯಪ್ರಾಣದೇವರು ಅವತಾರ ತಾಳಲು ಯಾವ ಸತ್ಕುಲವನ್ನು ಆರಿಸಿದರು ? | ಮಧ್ಯಗೇಹ (ನಡಿಲ್ಲಾಯ) | ೦೨ | ೦೯ | ಮಧ್ಯಗೇಹ ಭಟ್ಟರ ಸಾಧನೆ |
| ೧೯. | ಮಧ್ಯಗೇಹಭಟ್ಟರ ಮೂಲ ಸ್ಥಳ ಯಾವುದು? | ಶಿವಳ್ಳಿ ಗ್ರಾಮ | ೦೨ | ೧೦ | .. |
| ೨೦. | ಮಧ್ಯಗೇಹಭಟ್ಟರ ವಾಸ ಸ್ಥಳ ಯಾವುದು? | ಪಾಜಕ ಕ್ಷೇತ್ರ | ೦೨ | ೧೧ | .. |
| ೨೧. | ತತ್ವಜ್ಞಾನದ ನಿಧಿಯಾದ ಮಗನನ್ನು ಪಡೆಯಲು ಮಧ್ಯಗೇಹಭಟ್ಟರು ಯಾರನ್ನು ಶರಣು ಹೊಂದಿದರು ? | ನಾರಾಯಣ | ೦೨ | ೧೮ | .. |
| ೨೨. | ಸತ್ಪುತ್ರಪ್ರಾಪ್ತಿಗಾಗಿ ರಜತಪೀಠಪುರಾಧಿವಾಸಿಯಾದ ಅನಂತಾಸನನನ್ನು ಮಧ್ಯಗೇಹಭಟ್ಟರು ಎಷ್ಟು ವರ್ಷ ಆರಾಧಿಸಿದರು ? | ೧೨ ವರ್ಷ | ೦೨ | ೧೯ | .. |
| ೨೩. | ಮಧ್ಯಗೇಹಭಟ್ಟದಂಪತಿಗಳು ಭಗವತ್ಪ್ರೀತಿಗಾಗಿ ಮಾಡಿದ ವ್ರತಗಳಾವುವು ? | ಪಯೋವ್ರತ ಮೊದಲಾದವು | ೦೨ | ೨೧ | .. |
| ೨೪. | ಮುಖ್ಯಪ್ರಾಣದೇವರ ಅವತರಣವಾದ ಸ್ಥಳ ಯಾವುದು? | (ಉಡುಪಿ) ರಜತಪೀಠಪುರ | ೦೨ | ೨೪ | ಮಧ್ವಾಚಾರ್ಯರ ಅವತಾರ |
| ೨೫. | ವಾಸುದೇವನಿಗೆ ಹಾಲು ಕುಡಿಯಲು ಅನುಕೂಲವಾಗಲೆಂದು ಗೋದಾನ ಮಾಡಿದ ಸಾಧಕರು ಯಾರು? | ಪೂರ್ವಾಲಯ (ಮೂಡಿಲ್ಲಾಯರು) | ೦೨ | ೩೦ | .. |
| ೨೬. | ರಾತ್ರಿಯ ಸಂಚಾರದಲ್ಲಿ ಪಿಶಾಚಭಾದೆಯಿಂದ ಒಬ್ಬ ರಕ್ತ ಕಾರಿದಾಗ ಅಲ್ಲಿದ್ದವನಿಗೆ ಆದ ಆಶ್ಚರ್ಯವೇನು? | ಈ ಚಿಕ್ಕ ಮಗು ವಾಸುದೇವನಿಗೆ ಏನು ಆಗಲಿಲ್ಲ | ೦೨ | ೩೩ | .. |
| ೨೭. | ಮನೆಯಲ್ಲಿ ಯಾರೂ ಇಲ್ಲದಿದ್ದಾಗ ವಾಸುದೇವನನ್ನು ಅವನ ಸಹೋದರಿ ಸಮಾಧಾನಪಡಿಸಿದ್ದು ಹೇಗೆ ? | ಬೇಯಿಸಿದ ಹುರುಳಿಯನ್ನು ತಿನ್ನಿಸಿ | ೦೨ | ೩೮ | .. |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ | |
|---|---|---|---|---|---|
| ೨೮. | ದೊಡ್ಡವರಿಗೂ ಜೀರ್ಣಿಸಿಕೊಳ್ಳಲು ಕಷ್ಟವಾಗುವ ಹುರುಳಿಯನ್ನು ತಿಂದ ಮಗು ವಾಸುದೇವನಿಗೆ ಏನಾಯಿತು? | ಏನೂ ಆಗಲಿಲ್ಲ, ಆರೋಗ್ಯವಾಗಿದ್ದ | ೦೨ | ೪೧ | .. |
| ೨೯. | ಎತ್ತಿನ ಬಾಲವನ್ನು ಹಿಡಿದು ಮನೆಯಿಂದ ಹೊರಗೆ ಹೋಗಿ ಮನೆಯವರಿಗೆಲ್ಲ ಗಲಿಬಿಲಿಯಾದ ಘಟನೆ ನಡೆದಾಗ ವಾಸುದೇವನಿಗೆ ಎಷ್ಟು ವರ್ಷ ? | ಒಂದು ವರ್ಷ | ೦೨ | ೪೮ | .. |
| ೩೦. | ಮಧ್ಯಗೇಹಭಟ್ಟರು ಯಾರಿಂದ ಸಾಲವನ್ನು ಪಡೆದಿದ್ದರು ? | ಎತ್ತನ್ನು ಮಾರಿದ್ದ ಶ್ರೀಮಂತನಿಂದ | ೦೨ | ೫೦ | .. |
| ೩೧. | ತಂದೆ ಮಾಡಿದ್ದ ಸಾಲವನ್ನು ತೀರಿಸಲು ವಾಸುದೇವ ಏನನ್ನು ನೀಡಿದ ? | ಹುಣಸೆ ಬೀಜ | ೦೨ | ೫೧ | .. |
| ೩೨. | ಬಂಧುಗಳ ಸಡಗರದ ಮಧ್ಯದಲ್ಲಿ ತಾಯಿ ತನ್ನನ್ನು ಗಮನಿಸುತ್ತಿಲ್ಲ ಎಂದು ತಿಳಿದು ವಾಸುದೇವ ಮನೆಯಿಂದ ಹೊರಟ ಘಟನೆ ನಡೆದದ್ದು ಎಲ್ಲಿ ? | ನಡುವ್ಯೈರಿ (ನಿಡಿಯೂರು) | ೦೩ | ೦೨ | ಬಾಲ್ಯಲೀಲೆ |
| ೩೩. | ಕೊಡವೂರಿನ ನಾರಾಯಣನಿಗೆ ನಮಸ್ಕರಿಸಿದ ವಾಸುದೇವ ನಂತರ ಎಲ್ಲಿಗೆ ಹೋದ ? | ತಾಳಿಕೊಡೆಯ ದೇವಾಲಯ | ೦೩ | ೦೪ | .. |
| ೩೪. | ಅಶ್ವಮೇಧಕ್ಕೂ ಮಿಗಿಲಾದ ಫಲ ಯಾವುದರಿಂದ ಸಿಗುತ್ತದೆ ? | ಹರಿ ನಮಸ್ಕಾರ | ೦೩ | ೦೬ | .. |
| ೩೫. | ಕೊಡವೂರು – ತಾಳಿಕೊಡೆಯ ದೇವಾಲಯದಿಂದ ಹೊರಟ ವಾಸುದೇವ ನಂತರ ಎಲ್ಲಿಗೆ ಹೋಗಿ ನಮಸ್ಕರಿಸಿದ ? | ಪೂರ್ವಾಲಯ (ಚಂದ್ರಮೌಳೀಶ್ವರ ದೇವಾಲಯ) | ೦೩ | ೧೩ | .. |
| ೩೬. | ಕೊಡವೂರಿಗೆ ಹೇಗೆ ಬಂದೆ ಎಂಬ ತಂದೆಯ ಪ್ರಶ್ನೆಗೆ ವಾಸುದೇವನ ಉತ್ತರ ಏನಿತ್ತು? | ಸ್ನೇಹಿತನಾದ ಹರಿ ಜೊತೆಗಿದ್ದ | ೦೩ | ೧೩ | .. |
| ೩೭. | ಚಂದ್ರಮೌಳೀಶ್ವರ ದೇವಾಲಯದಲ್ಲಿ ನಮಸ್ಕರಿಸಿದ ವಾಸುದೇವ ನಂತರ ಹೋದದ್ದು ಎಲ್ಲಿಗೆ ? | ಪಶ್ಚಿಮಾಲಯ (ಅನಂತಾಸನದೇವಾಲಯ) | ೦೩ | ೧೪ | .. |
| ೩೮. | ವಾಸುದೇವನಿಗೆ ಅಕ್ಷರಭ್ಯಾಸದ ಪಾಠವಾಗುತ್ತಿದ್ದಾಗ ಏನು ಹೇಳುತ್ತಿದ್ದ ? | ಬರೆಸಿದ್ದನ್ನೇ ಮತ್ತೆ ಏಕೆ ಬೆರೆಸುವಿರಿ | ೦೩ | ೧೮ | ವಾಸುದೇವನ ಪ್ರತಿಭೆ |
| ೩೯. | ವಾಸುದೇವನ ಪ್ರತಿಭೆಗೆ ಜನರ ದೃಷ್ಟಿದೋಷ ತಟ್ಟದಿರಲಿ ಎಂದು ಮಧ್ಯಗೇಹಭಟ್ಟರು ಏನು ಮಾಡುತ್ತಿದ್ದರು ? | ಏಕಾಂತದಲ್ಲಿ ಪಾಠ ಮಾಡುತ್ತಿದ್ದರು | ೦೩ | ೨೦ | .. |
| ೪೦. | ಶಿವಭಟ್ಟನು ಹೇಳಿದ ಪುರಾಣದ ಕಥೆಗಳನ್ನು ತಿದ್ದಿ ಸರಿಯಾದ ಕಥೆಯನ್ನು ವಾಸುದೇವ ಹೇಳಿದ ಘಟನೆ ನಡೆದದ್ದು ಎಲ್ಲಿ? | ಘೃತವಲ್ಲೀ (ನೇಯಂಪಳ್ಳಿ) | ೦೩ | ೨೧ | .. |
| ೪೧. | ಮಧ್ಯಗೇಹಭಟ್ಟರು ಪ್ರವಚನ ಮಾಡುವಾಗ ಯಾವ ಶಬ್ದದ ಅರ್ಥವನ್ನು ಹೇಳಿರಲಿಲ್ಲ ? | ಲಿಕುಚ | ೦೩ | ೨೯ | .. |
| ೪೨. | ವಾಸುದೇವನ ಕೋಮಲವಾದ ಕಾಲಿನ ಬೆರಳಿನ ತುಳಿತಕ್ಕೆ ಸಿಲುಕಿ ಸತ್ತವ ಯಾರು? | ಸರ್ಪರೂಪದ ಅಸುರ | ೦೩ | ೩೮ | .. |
| ೪೩. | ವಾಸುದೇವನ ಗುರುಗಳ ವಂಶನಾಮವೇನು? | ಪೂಗವನ (ತೋಟಂತಿಲ್ಲಾಯ) | ೦೩ | ೪೯ | ಗುರುಕುಲ ವಾಸ |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ | |
|---|---|---|---|---|---|
| ೪೪. | ಗುರುಗಳು ಕೋಪದಿಂದ ಸರಿಯಾಗಿ ಓದುತ್ತಿಲ್ಲ ಎಂದು ಗದರಿಸಿದಾಗ ವಾಸುದೇವ ಏನು ಮಾಡಿದ ? | ಸ್ವಲ್ಪವೂ ತಪ್ಪಿಲ್ಲದೇ ವೇದಮಂತ್ರವನ್ನು ಹೇಳಿ ಗುರುಗಳನ್ನೇ ಆಶ್ಚರ್ಯಚಕಿತರನ್ನಾಗಿಸಿದ | ೦೩ | ೫೨ | .. |
| ೪೫. | ವಾಸುದೇವ ಯಾರ ಕಿವಿಯನ್ನು ಊದಿ ಸಹಿಸಲಸಾಧ್ಯವಾದ ತಲೆನೋವನ್ನು ಪರಿಹರಿಸಿದ ? | ಗುರುಪುತ್ರ | ೦೩ | ೫೩ | .. |
| ೪೬. | ದುಷ್ಟರನ್ನು ಶಿಕ್ಷಿಸುವ ಸಾಮರ್ಥ್ಯ, ಯೋಗ್ಯತೆ ಎಲ್ಲಾ ಇದ್ದರೂ ಅದಕ್ಕೆ ಅವಕಾಶವಿಲ್ಲದ ಸನ್ಯಾಸವನ್ನು ಸ್ವೀಕರಿಸಿದ್ದು ಏಕೆ? | ಆ ಕೆಲಸವನ್ನು ದುರ್ಗಾದೇವಿ ಮಾಡುತ್ತಾಳೆ ಎಂದು | ೦೪ | ೦೩ | .. |
| ೪೭. | ಜಗದ್ಗುರುಗಳಾದ ಮಧ್ವಾಚಾರ್ಯರು ಗುರುಗಳನ್ನು ಅನ್ವೇಷಿಸಿದ ಹಿನ್ನಲೆ ಏನು? | ಗುರುಗಳ ಅನ್ವೇಷಣೆ ಮುಖ್ಯ ಕರ್ತವ್ಯ ಎಂದು ಲೋಕಕ್ಕೆ ತಿಳಿಸಲು | ೦೪ | ೦೫ | .. |
| ೪೮. | ಅಚ್ಯುತಪ್ರೇಕ್ಷರಲ್ಲಿದ್ದ ನಿರ್ಮಲವಾದ ಅಂತಃಕರಣಶುದ್ಧಿಗೆ ಕಾರಣವೇನು? | ದ್ರೌಪದಿ ಮಾಡಿದ ಪರಿಶುದ್ಧವಾದ ಅನ್ನವನ್ನು ಉಂಡದ್ದು | ೦೪ | ೦೭ | ಅಚ್ಯುತಪ್ರೇಕ್ಷಾಚಾರ್ಯರು |
| ೪೯. | ತತ್ವಜ್ಞಾನಕ್ಕಾಗಿ ನಾರಾಯಣನನ್ನು ಆರಾಧಿಸು ಎಂಬ ಗುರುಗಳ ಆದೇಶದಂತೆ ಆರಾಧನೆಗಾಗಿ ಅಚ್ಯುತಪ್ರೇಕ್ಷಾಚಾರ್ಯರು ಆರಿಸಿಕೊಂಡ ಸ್ಥಳ ಯಾವುದು? | ಉಡುಪಿಯ ಅನಂತಾಸನ ದೇವಾಲಯ | ೦೪ | ೧೨ | .. |
| ೫೦. | ಮಧ್ವಾಚಾರ್ಯರ ಪ್ರಕಾರ ಸನ್ಯಾಸಕ್ಕೆ ಸೂಕ್ತವಾದ ಕಾಲ ಯಾವುದು ? | ಪಕ್ವವಾದ ವೈರಾಗ್ಯ ಬಂದಾಗ | ೦೪ | ೨೩ | .. |
| ೫೧. | ಮಧ್ಯಗೇಹಭಟ್ಟರಿಗೆ ಮತ್ತೊಬ್ಬ ಮಗ ಹುಟ್ಟಿದ್ದು ಮಧ್ವಾಚಾರ್ಯರಿಗೆ ಹೇಗೆ ಅನುಕೂಲವಾಯಿತು ? | ಸನ್ಯಾಸ ಸ್ವೀಕರಿಸಲು | ೦೪ | ೨೭ | .. |
| ೫೨. | ಈಗಲೂ ಹನ್ನೆರಡು ವರ್ಷಕ್ಕೊಮ್ಮೆ ಉಡುಪಿಯ ಸರೋವರಕ್ಕೆ ಗಂಗಾದೇವಿಯು ಬರುವುದು ಏತಕ್ಕಾಗಿ ? | ಮಧ್ವಾಚಾರ್ಯರ ವೈಶಿಷ್ಟ್ಯವನ್ನು ಜಗತ್ತಿಗೆ ತಿಳಿಸಲು | ೦೪ | ೪೨ | .. |
| ೫೩. | ಮಧ್ವಾಚಾರ್ಯರು ಸನ್ಯಾಸ ಸ್ವೀಕರಿಸಿ ೪೦ ದಿನ ಕಳೆಯಲು ಯಾರ ಜೊತೆ ವಾದ ಮಾಡಿದರು ? | ವಾಸುದೇವ | ೦೪ | ೪೩ | .. |
| ೫೪. | ಪಾಠವೇ ಆಗದ ಭಾಗವತವನ್ನು ಅಷ್ಟು ಸುಂದರವಾಗಿ ಹೇಗೆ ಹೇಳಿದಿರಿ ಎಂಬ ಅಚ್ಯುತಪ್ರೇಕ್ಷಾಚಾರ್ಯರ ಪ್ರಶ್ನೆಗೆ ಮಧ್ವಾಚಾರ್ಯರ ಉತ್ತರವೇನಿತ್ತು ? | ಹಿಂದಿನ ಜನ್ಮದಲ್ಲಿಯೇ ಇದನ್ನು ತಿಳಿದಿರುವೆ | ೦೪ | ೫೩ | .. |
| ೫೫. | ವಾಕ್ಯಾರ್ಥ ಸಭೆಯಲ್ಲಿ ವಿದ್ವಾಂಸರ ಅನುಮಾನಗಳನ್ನು ಖಂಡಿಸಿ ತಾರ್ಕಿಕರನ್ನು ಗೆದ್ದ ಮಧ್ವಾಚಾರ್ಯರಿಗೆ ಬಂದ ಹೆಸರೇನು ? | ಅನುಮಾನತೀರ್ಥ | ೦೫ | ೦೭ | ವಾದಕೌಶಲ |
| ೫೬. | ಉಡುಪಿಗೆ ವಾದ ಮಾಡಲು ಬಂದ ಬೌದ್ಧ ವಿದ್ವಾಂಸರು ಯಾರು ? | ವಾದಿಸಿಂಹ, ಬುದ್ಧಿಸಾಗರ | ೦೫ | ೦೮ | .. |
| ೫೭. | ಆಚಾರ್ಯರನ್ನು ಎದುರಿಸಲಾಗದೆ 'ನಾಳೆ ವಾದವನ್ನು ಮುಂದುವರಿಸೋಣ' ಎಂದ | ರಾತ್ರಿ ಊರು ಬಿಟ್ಟು ಓಡಿ ಹೋದರು | ೦೫ | ೧೫ | .. |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ | |
|---|---|---|---|---|---|
| | ವಾದಿಸಿಂಹ ಮತ್ತು ಬುದ್ಧಿಸಾಗರ ಏನು ಮಾಡಿದರು ? | | | | |
| ೫೮. | ಮಧ್ವಾಚಾರ್ಯರಿಗೆ ಬ್ರಹ್ಮಸೂತ್ರ ಭಾಷ್ಯೆಯನ್ನು ರಚಿಸಬೇಕೆಂದು ಪ್ರಾರ್ಥಿಸಿಕೊಂಡವರು ಯಾರು? | ಲಿಕುಚಕುಲದ ಜೇಷ್ಠಯತಿಗಳು | **೦೫** | **೨೭** | .. |
| ೫೯. | ಮಧ್ವಾಚಾರ್ಯರು ಪೀಠಾಧಿಪತಿಗಳಾಗಿ ಮಾಡಿದ ಮೊದಲ ಸಂಚಾರ ಎಲ್ಲಿಗೆ ? | ವಿಷ್ಣುಮಂಗಲ | **೦೫** | **೩೦** | ದಕ್ಷಿಣಭಾರ ೀತ ಸಂಚಾರ |
| ೬೦. | ಭೋಜನದ ಬಳಿಕ ೨೦೦ ಬಾಳೆಹಣ್ಣುಗಳನ್ನು ತಿಂದು ಜೀರ್ಣಿಸಿಕೊಂಡ ಮಧ್ವಾಚಾರ್ಯರ ಸಾಮರ್ಥ್ಯವನ್ನು ಅಚ್ಯುತಪ್ರೇಕ್ಷರು ಪ್ರಶ್ನಿಸಿದಾಗ ಮಧ್ವಾಚಾರ್ಯರು ಏನೆಂದರು ? | ಹೆಬ್ಬೆರಳಿನ ಗಾತ್ರದ ಜಠರಾಗ್ನಿ ಇರುವುದರಿಂದ ಜೀರ್ಣವಾಗುತ್ತದೆ | **೦೫** | **೩೩** | .. |
| ೬೧. | ಪಯಸ್ವಿನೀ ನದಿಯ ತೀರದಲ್ಲಿ ಮಧ್ವಾಚಾರ್ಯರು ಯಾರನ್ನು ಸ್ಮರಿಸಿಕೊಂಡರು ? | ಮುಂದೆ ಅವತಾರ ತಾಳುವ ದುರ್ಗಾದೇವಿಯನ್ನು | **೦೫** | **೩೫** | .. |
| ೬೨. | ರಾಮೇಶ್ವರದಲ್ಲಿ ಮಧ್ವಾಚಾರ್ಯರು ಯಾರ ಜೊತೆ ಚಾತುರ್ಮಾಸ್ಯವ್ರತ ಕೈಗೊಂಡರು ? | ಗುರುಗಳ ಜೊತೆ | **೦೫** | **೪೬** | .. |
| ೬೩. | ರಾಮೇಶ್ವರದಿಂದ ಮಧ್ವಾಚಾರ್ಯರು ಎಲ್ಲಿಗೆ ಹೋದರು ? | ಶ್ರೀರಂಗಂ | **೦೫** | **೪೭** | .. |
| ೬೪. | ಐತರೇಯ ಸೂಕ್ತವನ್ನು ಮಧ್ವಾಚಾರ್ಯರು ವ್ಯಾಖ್ಯಾನಿಸಿದಾಗ ಅದನ್ನು ನಿರಾಕರಿಸಲು ವೇದ ವಿದ್ವಾಂಸರು ಬೇರೆ ಅರ್ಥದಲ್ಲಿ ಆ ಸೂಕ್ತವನ್ನು ವ್ಯಾಖ್ಯಾನಿಸಿದಾಗ ಮಧ್ವಾಚಾರ್ಯರು ಏನು ಮಾಡಿದರು ? | ಆ ಅರ್ಥವೂ ಸರಿ (ಏಕೆಂದರೆ ವೇದಕ್ಕೆ ಕನಿಷ್ಠ ಮೂರು ಅರ್ಥಗಳು) ಎಂದರು | **೦೬** | **೦೪** | ಮಧ್ವಾಚಾ ರ್ಯರ ವಾಕ್ಯಾರ್ಥ ಶಕ್ತಿ |
| ೬೫. | ವೇದಗಳಿಗೆ ಮೂರು ಅರ್ಥಗಳಿದ್ದರೆ ಮಹಾಭಾರತಕ್ಕೆ ಎಷ್ಟು ಅರ್ಥ ? | ೧೦ | **೦೬** | **೦೪** | .. |
| ೬೬. | ವಿಷ್ಣು ಸಹಸ್ರನಾಮಕ್ಕೆ ೧೦೦ ಅರ್ಥ ಹೇಳಿ ಎಂದು ಸವಾಲೆಸೆದ ಬ್ರಾಹ್ಮಣರಿಗೆ ಮಧ್ವಾಚಾರ್ಯರ ಸವಾಲೇನು ? | ತಮ್ಮ ವ್ಯಾಖ್ಯಾನವನ್ನು ಅರ್ಥೈಸಿಕೊಂಡು ಅನುವಾದ ಮಾಡಬೇಕು | **೦೬** | **೦೬** | .. |
| ೬೭. | ಮಧ್ವಾಚಾರ್ಯರು ಮೊದಲು ಬದರಿಯಾತ್ರೆಗೆ ಹೋಗುವ ಮುನ್ನ ರಚಿಸಿದ ಗ್ರಂಥ ಯಾವುದು ? | ಗೀತಾಭಾಷ್ಯ | **೦೬** | **೩೨** | ಮಧ್ವಾಚಾ ರ್ಯರ ಮೊದಲ ಬದರಿ ಯಾತ್ರೆ |
| ೬೮. | ಗೀತಾಭಾಷ್ಯವನ್ನು ರಚಿಸಿದ ಮಧ್ವಾಚಾರ್ಯರು ಆ ಗ್ರಂಥವನ್ನು ಎಲ್ಲಿ ಯಾರಿಗೆ ಅರ್ಪಿಸಿದರು ? | ಬದರಿಯಲ್ಲಿ ನಾರಾಯಣನಿಗೆ | **೦೬** | **೩೮** | .. |
| ೬೯. | ಮಧ್ವಾಚಾರ್ಯರು ಎಷ್ಟು ದಿನ ಕಾಷ್ಠಮೌನ ಉಪವಾಸ ಮಾಡಿದರು ? | ೪೮ ದಿನ | **೬** | **೪೫** | .. |
| ೭೦. | ನೇದೃಶಂ ಸ್ಥಲಮಲಂ ಶಮಲಘ್ನಂ ನಾಸ್ಯ ತೀರ್ಥಸಲಿಲಸ್ಯ ಸಮಂ ವಾ । | ಮಧ್ವಾಚಾರ್ಯರು ಬರೆದು ಶಿಷ್ಯರಿಗೆ ನೀಡಿದ ಭವ್ಯ ಸಂದೇಶ | **೦೬** | **೪೭** | .. |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ | |
|---|---|---|---|---|---|
| | ನಾಸ್ತಿ ವಿಷ್ಣುಸದೃಶಂ ನನು ದೈವಂ ನಾಸ್ಮದುಕ್ತಿಸದೃಶಂ ಹಿತರೂಪಮ್ ॥ ಏನಿದು ? | | | | |
| ೨೧. | ಸತ್ಯತೀರ್ಥರು ಮಧ್ವಾಚಾರ್ಯರ ಬಳಿ ಎಷ್ಟು ಬಾರಿ ಐತರೇಯ ಶ್ರುತಿಯ ಅರ್ಥವನ್ನು ಕೇಳಿದ್ದಾರೆ ? | ಮೂರು ಬಾರಿ | ೦೬ | ೫೦ | .. |
| ೨೨. | ಉತ್ತರ ಬದರಿಗೆ ಹೋಗುತ್ತಿದ್ದಾಗ ಹಿಂಬಾಲಿಸಿದ ಸತ್ಯ ತೀರ್ಥರನ್ನು ಮಧ್ವಾಚಾರ್ಯರು ಏನು ಮಾಡಿದರು ? | ಹಿಂತಿರುಗಿ ಎಂದು ಕೈಯಿಂದ ಸನ್ನೆ ಮಾಡಿದರು | ೦೬ | ೫೨ | .. |
| ೨೩. | ತುಂಬಾ ದೂರ ಮಧ್ವಾಚಾರ್ಯರನ್ನು ಹಿಂಬಾಲಿಸಿದ ಸತ್ಯ ತೀರ್ಥರು ಶ್ರೀಮದಾಚಾರ್ಯರ ಕೈ ಸನ್ನೆಯಿಂದ ಏನಾದರು ? | ಅನಂತಮಠವನ್ನು ತಲುಪಿದರು | ೦೬ | ೫೨ | .. |
| ೨೪. | ಉತ್ತರಬದರಿಗೆ ಹೋದ ಶ್ರೀಮಧ್ವಾಚಾರ್ಯರು ಯಾರನ್ನು ಭೇಟಿ ಮಾಡಿದರು ? | ವೇದವ್ಯಾಸರನ್ನು | ೦೭ | ೧೬ | ಉತ್ತರಬದರಿಯಲ್ಲಿ ಮಧ್ವಾಚಾರ್ಯರು |
| ೨೫. | ವೇದವ್ಯಾಸರಿಂದ ರಚಿತವಾದ ಗ್ರಂಥಗಳು ಯಾವುವು? | ಮಹಾಭಾರತ, ೧೮ ಪುರಾಣಗಳು ಮತ್ತು ಬ್ರಹ್ಮಸೂತ್ರ | ೦೭ | ೨೦ | .. |
| ೨೬. | ಮಗನಾದ ಶುಕಾಚಾರ್ಯರಿಗಿಂತಲೂ ಹೆಚ್ಚು ವೇದವ್ಯಾಸರ ಪ್ರೀತಿಯನ್ನು ಪಡೆದವರು ಯಾರು ? | ಶ್ರೀ ಮಧ್ವಾಚಾರ್ಯರು | ೦೭ | ೫೫ | .. |
| ೨೭. | ವೇದವ್ಯಾಸದೇವರ ಮತ್ತು ಮಧ್ವಾಚಾರ್ಯರ ಗುರು–ಶಿಷ್ಯ ಸಂಬಂಧವನ್ನು ಹೊಗಳಿದವರು ಯಾರು? | ದೇವತೆಗಳು | ೦೮ | ೦೨ | ನಾರಾಯಣಾಶ್ರಮದಲ್ಲಿ ಮಧ್ವಾಚಾರ್ಯರು |
| ೨೮. | ವ್ಯಾಸಾಶ್ರಮದಲ್ಲಿ ವೇದವ್ಯಾಸರಿಂದ ಪಾಠವನ್ನು ಕೇಳಿದ ಮಧ್ವಾಚಾರ್ಯರು ಎಲ್ಲಿಗೆ ಹೋದರು ? | ನಾರಾಯಣಾಶ್ರಮಕ್ಕೆ | ೦೮ | ೦೮ | .. |
| ೨೯. | ನಾರಾಯಣಾಶ್ರಮದಲ್ಲಿ ನಾರಾಯಣನು ಮಧ್ವಾಚಾರ್ಯರಿಗೆ ಮಾಡಿದ ಆದೇಶವೇನು? | ಬ್ರಹ್ಮಸೂತ್ರಭಾಷ್ಯರಚನೆ | ೦೮ | ೪೬ | .. |
| ೩೦. | ನಾರಾಯಣಾಶ್ರಮದಲ್ಲಿ ೩ ವೇದಗಳಂತೆ, ೩ ಅಗ್ನಿಗಳಂತೆ ಕಂಗೊಳಿಸುತ್ತಿದ್ದವರು ಯಾರು ? | ವೇದವ್ಯಾಸರು ನಾರಾಯಣ ಮತ್ತು ಮಧ್ವಾಚಾರ್ಯರು | ೦೮ | ೫೪ | .. |
| ೩೧. | ನಾರಾಯಣ ಆಶ್ರಮದಿಂದ ವ್ಯಾಸಶ್ರಮಕ್ಕೆ ಬರುವಾಗ ಮಧ್ವಾಚಾರ್ಯರ ಜೊತೆಗೆ ಇದ್ದವರು ಯಾರು? | ವೇದವ್ಯಾಸರು | ೦೯ | ೦೧ | ಬದರಿಗೆ ಹಿಂತಿರುಗಿದ ಮಧ್ವಾಚಾರ್ಯರು |
| ೩೨. | ಮಧ್ವಾಚಾರ್ಯರು ರಚಿಸಿದ ಬ್ರಹ್ಮಸೂತ್ರಭಾಷ್ಯವನ್ನು ಬರೆದವರು ಯಾರು ? | ಸತ್ಯತೀರ್ಥರು | ೦೯ | ೧೩ | .. |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ | |
|---|---|---|---|---|---|
| ೮೩. | ಗೋದಾವರೀತೀರದ ವೇದ ಸಭೆಯಲ್ಲಿ ಮಧ್ವಾಚಾರ್ಯರ ಸಾಮರ್ಥ್ಯವನ್ನು ನೋಡಿ ಅವರ ಶಿಷ್ಯತ್ವವನ್ನು ಪಡೆದವರು ಯಾರು? | ಶೋಭನಭಟ್ಟರು | ೦೯ | ೧೭ | .. |
| ೮೪. | ಶರಣಾಗತರಾದ ಶೋಭನಭಟ್ಟರು ಮಧ್ವಾಚಾರ್ಯರಿಂದ ಯಾವ ಪಾಠವನ್ನು ಕೇಳಿದರು ? | ಬ್ರಹ್ಮಸೂತ್ರಭಾಷ್ಯ | ೦೯ | ೧೮ | .. |
| ೮೫. | ಶಾಸ್ತ್ರ ಅಧ್ಯಯನ ಮಾಡುವವರಿಗೆ ಬರುವ ವಿಘ್ನಗಳನ್ನು ಪರಿಹರಿಸಿಕೊಳ್ಳಲು ಏನು ಮಾಡಬೇಕು ? | ಉಡುಪಿ ಶ್ರೀಕೃಷ್ಣನ ದರ್ಶನ | ೦೯ | ೪೦ | .. |
| ೮೬. | ಶ್ರೀಮಧ್ವಾಚಾರ್ಯರ ಸ್ಪರ್ಶದಿಂದ ವಿಶೇಷ ಸನ್ನಿಧಾನವನ್ನು ಪಡೆದ ಶ್ರೀಕೃಷ್ಣಪ್ರತಿಮೆಯನ್ನು ಮೂವತ್ತು ಜನ ಸೇರಿಯೂ ಎತ್ತಲಾಗದಿದ್ದಾಗ ಏನು ಮಾಡಿದರು ? | ಶ್ರೀಮಧ್ವಾಚಾರ್ಯರೇ ಅನಾಯಾಸವಾಗಿ ಮಠಕ್ಕೆ ತಂದರು | ೦೯ | ೪೨ | .. |
| ೮೭. | ಶ್ರೀಮಧ್ವಾಚಾರ್ಯರ ಪೂರ್ವಾಶ್ರಮದ ಗುರುಪುತ್ರನಾದ ವಾಸುದೇವನ ಯಜ್ಞದಲ್ಲಿ 'ಯಜ್ಞವನ್ನು ಮಾಡಿಸುವ ಅರ್ಹತೆ ತನಗೆ ಮಾತ್ರ' ಎಂದು ಅಹಂಕಾರ ಪ್ರದರ್ಶಿಸಿದವ ಯಾರು ? | ಜರಾಘಟಿತ ಗೋತ್ರ (ಮರಡಿತಾಯ) | ೦೯ | | .. |
| ೮೮. | ಶ್ರೀಮಧ್ವಾಚಾರ್ಯರ ಗುರುಪುತ್ರನ ಯಾಗಕ್ಕೆ ಹೋತೃಗಳಾಗಿದ್ದವರು ಯಾರು? | ಮಧ್ವಾಚಾರ್ಯರ ಅನುಜ | ೦೯ | ೪೮ | .. |
| ೮೯. | ಮಧ್ವಾಚಾರ್ಯರು ಮಾಡಿಸಿದ ಯಾಗದ ಸಂದೇಶವೇನು ? | ಅಪರೋಕ್ಷ ಜ್ಞಾನಕ್ಕೆ ಶ್ರವಣಾದಿಗಳಂತೆ ಕರ್ಮವೂ ಸಾಧನ | ೦೯ | ೫೧ | .. |
| ೯೦. | ಶ್ರೀಮಧ್ವಾಚಾರ್ಯರಿಗೆ ಮಣ್ಣನ್ನು ಅಗೆಯಲು ಪ್ರೇರೇಪಿಸಿ ನಂತರ ತಾನೇ ಮಣ್ಣನ್ನು ಅಗೆಯುತ್ತಾ ಮೈಮರೆತ ರಾಜ ಯಾರು? | ಈಶ್ವರದೇವ | ೧೦ | ೦೪ | ಶ್ರೀಮಧ್ವಾಚಾರ್ಯರ ಸಾಮರ್ಥ್ಯ |
| ೯೧. | ನಾನೇನೇನಾನೇನಾನೇನೋ .. .. ಎಂಬ ಒಂದೇ ಅಕ್ಷರದ ಅಪೂರ್ವವಾದ ಶ್ಲೋಕ ಇರುವುದು ಎಲ್ಲಿ? | ಮಧ್ವವಿಜಯ–೧೦ನೇ ಸರ್ಗ | ೧೦ | ೦೬ | .. |
| ೯೨. | ಮಧ್ವಾಚಾರ್ಯರು ತಮ್ಮ ಶಿಷ್ಯರನ್ನು ದೋಣಿಯೇ ಇಲ್ಲದೆ ಯಾವ ನದಿಯನ್ನು ಸ್ವ ಸಾಮರ್ಥ್ಯದಿಂದ ದಾಟಿಸಿದರು ? | ಗಂಗಾನದಿ | ೧೦ | ೦೮ | .. |
| ೯೩. | ನದಿಯನ್ನು ದಾಡುತ್ತಿದ್ದ ಮಧ್ವಾಚಾರ್ಯರ ಪರಿವಾರವನ್ನು ತಡೆಯಲು ಬಂದ ರಾಜಭಟರನ್ನು ಮಧ್ವಾಚಾರ್ಯರು ಯಾವ ಭಾಷೆಯಲ್ಲಿ ಮಾತನಾಡಿಸಿದರು ? | ತುರುಷ್ಕಭಾಷೆ | ೧೦ | ೧೦ | .. |
| ೯೪. | ಶ್ರೀಮಧ್ವಾಚಾರ್ಯರ ವರ್ಚಸ್ಸನ್ನು ಕಂಡು ಆಶ್ಚರ್ಯ ಚಕಿತನಾದ ತುರುಷ್ಕರಾಜ ಏನು ಮಾಡಿದ ? | ಅರ್ಧರಾಜ್ಯವನ್ನೇ ಕೊಟ್ಟ | ೧೦ | ೧೮ | .. |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ | |
|---|---|---|---|---|---|
| ೯೫. | ಮಧ್ವಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯವನ್ನು ಯಾರ ಆದೇಶದಂತೆ ಎಲ್ಲಿ ರಚಿಸಿದರು ? | ವೇದವ್ಯಾಸರ ಆದೇಶದಂತೆ ಉಡುಪಿಯಲ್ಲಿ | ೧೦ | ೨೫ | .. |
| ೯೬. | ದೋಣಿಗಳಿಲ್ಲದಿದ್ದರೂ ತಾವೊಬ್ಬರೇ ವಸ್ತ್ರವೂ ಒದ್ದೆಯಾಗದಂತೆ ಗಂಗಾ ನದಿಯನ್ನು ದಾಟಿದವರ್ಯಾರು ? | ಶ್ರೀಮಧ್ವಾಚಾರ್ಯರು | ೧೦ | ೩೦ | .. |
| ೯೭. | ತಾವೇ ಬಲಿಷ್ಠರು ಎಂಬ ಅಹಮ್ಮಿನ ಎಷ್ಟು ಶಿಷ್ಯರನ್ನು ಮಧ್ವಾಚಾರ್ಯರು ಏಕಕಾಲದಲ್ಲಿ ಹಿಡಿದಿಟ್ಟು ನಿಗ್ರಹಿಸಿದರು ? | ೧೫ ಜನ | ೧೦ | ೩೯ | .. |
| ೯೮. | ಮಧ್ವಾಚಾರ್ಯರು ಶಿಷ್ಯರಿಂದ ಮಣ್ಣನ್ನು ಅಗೆಸಿ ತಾವು ಮೊದಲು ಉಪಯೋಗಿಸಿದ ಮಹಾಗದೆಯನ್ನು ತೋರಿಸಿದ ಸ್ಥಳ ಯಾವುದು ? | ಕುರುಕ್ಷೇತ್ರ | ೧೦ | ೪೯ | .. |
| ೯೯. | ಎಲ್ಲರೂ ಮೈಮರೆಯುವಂತೆ ಸುಮಧುರವಾಗಿ ಹಾಡಿ ಮರದಲ್ಲಿ ಆ ಕೂಡಲೇ ಫಲಪುಷ್ಪಗಳು ಅರಳುವಂತೆ ಮಧ್ವಾಚಾರ್ಯರು ಮಾಡಿದ ಆ ಸ್ಥಳ ಯಾವುದು? | ಗೋವಿಷಯ (ಪಶುಪೆ) | ೧೦ | ೫೩ | .. |
| ೧೦೦. | ಶೇಷದೇವರು, ಸನಕಾದಿಗಳು ಮಧ್ವಾಚಾರ್ಯರ ಬಳಿ ಬಂದದ್ದು ಏಕೆ? | ಮಧ್ವಾಚಾರ್ಯರ ಪ್ರವಚನವನ್ನು ಕೇಳಲು | ೧೧ | ೦೧ | ಮಧ್ವಾಚಾರ್ಯರ ಗ್ರಂಥಗಳ ಶಕ್ತಿ |
| ೧೦೧. | ಮಧ್ವಾಚಾರ್ಯರ ಗ್ರಂಥಗಳ ಅಧ್ಯಯನದ ಫಲಗಳೇನು ? | ಮುಖ್ಯಫಲ ಮೋಕ್ಷ ಮತ್ತು ಅಮುಖ್ಯಫಲ ಸ್ವರ್ಗಾದಿಗಳು | ೧೧ | ೦೬ | .. |
| ೧೦೨. | ಮಾಯಾವಾದಿಗಳೂ ಮಧ್ವಾಚಾರ್ಯರ ಭಾಷ್ಯಯನ್ನು ಸ್ತುತಿಸಿದ ಬಗೆ . | ಅತ್ಯಂತ ಸರಳ ಮತ್ತು ಅತ್ಯಂತ ಪ್ರಬಲ | ೧೨ | ೧೩ | .. |
| ೧೦೩. | ಎಲ್ಲಾ ಮಧ್ವ ಶಿಷ್ಯರಲ್ಲಿ ಕಾಣಿಸಿರುವ ಸಮಾನವಾದ ಚಿಹ್ನೆ ಯಾವುದು? | ಶಂಕ ಚಕ್ರಾದಿ ವೈಷ್ಣವ ಚಿಹ್ನೆ | ೧೨ | ೧೪ | .. |
| ೧೦೪. | ಮಧ್ವಾಚಾರ್ಯರು ವೇದಗಳಿಗೆ ವ್ಯಾಖ್ಯಾನವನ್ನು ಮಾಡಿದಾಗ ಪೌಂಡ್ರಕ ವಾಸುದೇವನಂತೆ ತಾನು ವ್ಯಾಖ್ಯಾನ ಮಾಡಲು ಹೋಗಿ ಸೋತವ ಯಾರು? | ಪುಂಡರಿಕಪುರಿ | ೧೨ | ೩೫ | .. |
| ೧೦೫. | ಆರು ವೇದಾಂಗಗಳಲ್ಲಿ ಹೇಳಿದ ಎಲ್ಲಾ ನಿಯಮಗಳನ್ನು ಅನುಸರಿಸಿ ಸ್ಪಷ್ಟವಾಗಿ ವೇದಘೋಷವನ್ನು ಮಾಡುತ್ತಿದ್ದವರು ಯಾರು? | ಶ್ರೀ ಮದ್ವಾಚಾರ್ಯರು | ೧೨ | ೩೯ | .. |
| ೧೦೬. | ವೇದವನ್ನು ವ್ಯಾಖ್ಯಾನ ಮಾಡಲು ಹೊರಟ ಪುಂಡರಿಕಪುರಿಯು ಹೇಗೆ ಸೋತ ? | ಸರಿಯಾಗಿ ಪದಚ್ಛೇದವನ್ನು ಮಾಡಲು ಬರದೇ ಸೋತ | ೧೨ | ೪೦ | .. |
| ೧೦೭. | ಮಧ್ವಾಚಾರ್ಯರ ಗ್ರಂಥ ಪಾಲಕರು ಯಾರು? | ಶಂಕರ ಪಂಡಿತಾಚಾರ್ಯರು | ೧೨ | ೪೨ | .. |
| ೧೦೮. | ಕೊಡಿಪಾಡಿಯ ಚಾತುರ್ಮಾಸ್ಯವನ್ನು ಪೂರೈಸಿದ ಮಧ್ವಾಚಾರ್ಯರನ್ನು ತಮ್ಮಲ್ಲಿಗೆ ಬರಬೇಕೆಂದು ಪ್ರಾರ್ಥಿಸಿದ ರಾಜ ಯಾರು? | ಜಯಸಿಂಹ | ೧೩ | ೦೨ | ಜಯಸಿಂಹ’ನ ಬಳಿ ಮಧ್ವಾಚಾರ್ಯರು |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ | |
|---|---|---|---|---|---|
| ೧೦೯. | ಕಬೆನಾಡಿಗೆ (ಕಾಸರಗೋಡಿಗೆ) ಬಂದ ಮಧ್ವಾಚಾರ್ಯರು ಯಾವ ದೇವಸ್ಥಾನವನ್ನು ಭೇಟಿ ಮಾಡಿದರು ? | ಮದನೇಶ್ವರ (ಮದೂರು) | ೧೩ | ೦೯ | .. |
| ೧೧೦. | ಮಧ್ವಾಚಾರ್ಯರ ಪರಿವಾರದವರು ಪ್ರಯಾಣದಲ್ಲಿ ಯಾರನ್ನು ನೋಡುತ್ತಾ ಆಯಾಸವನ್ನು ಪರಿಹರಿಸಿಕೊಳ್ಳುತ್ತಿದ್ದರು ? | ಮಧ್ವಾಚಾರ್ಯರನ್ನು | ೧೩ | ೨೦ | .. |
| ೧೧೧ | ತ್ರಿವಿಕ್ರಮ ಪಂಡಿತಾಚಾರ್ಯರ ತಂದೆಯ ಹೆಸರೇನು? | ಸುಬ್ರಹ್ಮಣ್ಯ ಪಂಡಿತಾಚಾರ್ಯ | ೧೩ | ೪೩ | ತ್ರಿವಿಕ್ರಮ ಪಂಡಿತಾಚಾರ್ಯರಿಗೆ ಮಧ್ವಾಚಾರ್ಯರು ಸಿಕ್ಕಿದ್ದು |
| ೧೧೨ | ಪಂಡಿತಾಚಾರ್ಯರ ಗೋತ್ರ ಯಾವುದು ? | ಅಂಗಿರಸ್ | ೧೩ | ೪೩ | .. |
| ೧೧೩. | ತ್ರಿವಿಕ್ರಮ ಪಂಡಿತಾಚಾರ್ಯರು ಚಿಕ್ಕ ವಯಸ್ಸಿನಲ್ಲಿಯೇ ಬರೆದ ಮಹಾಕಾವ್ಯ ಯಾವುದು? | ಉಷಾಹರಣ | ೧೩ | ೪೮ | .. |
| ೧೧೪. | ಮಾಯವಾದದ ಶ್ರೇಷ್ಠ ಪಂಡಿತರಾಗಿದ್ದ ತ್ರಿವಿಕ್ರಮ ಪಂಡಿತಾಚಾರ್ಯರಿಗೆ ಅವರ ತಂದೆ ನೀಡಿದ ಸಂದೇಶವೇನು? | ಮಾಯಾವಾದದ ನಿರ್ಗುಣ ಉಪಾಸನೆ ಸರಿ ಇಲ್ಲ | ೧೩ | ೫೨ | .. |
| ೧೧೫ | ಮಾಯಾವಾದವನ್ನು ರಕ್ಷಿಸಿ ಎಂದು ಬಂದ ಜನರಿಗೆ ನಾನೊಬ್ಬನೇ ಮಧ್ವಾಚಾರ್ಯರನ್ನು ಜಯಿಸುತ್ತೇನೆ ಎಂದ ತ್ರಿವಿಕ್ರಮಪಂಡಿತ ಆಚಾರ್ಯರ ಮಾತು – | ಮಾಯಾವಾದಿಗಳನ್ನು ಸಮಾಧಾನ ಪಡಿಸಲು | ೧೩ | ೬೫ | .. |
| ೧೧೬. | ರಾತ್ರಿಯ ಹೊತ್ತು ಯಾರಿಗೂ ತಿಳಿಯದೆ ಮಧ್ವಾಚಾರ್ಯರ ಗ್ರಂಥಗಳನ್ನು ಅಧ್ಯಯನ ಮಾಡಿದ ತ್ರಿವಿಕ್ರಮಪಂಡಿತರಿಗೆ ಅನಿಸಿದ್ದೇನು? | ಮಧ್ವರ ಸಿದ್ಧಾಂತವೇ ಸರಿಯಾದ ಸಿದ್ಧಾಂತ | ೧೩ | ೬೭ | .. |
| ೧೧೭ | ಪ್ರಾತಃಕಾಲದ ಅನುಷ್ಠಾನವನ್ನು ಮುಗಿಸಿ ಮಧ್ವಾಚಾರ್ಯರು ಏನು ಮಾಡುತ್ತಿದ್ದರು ? | ಪಾಠ | ೧೪ | ೧೮ | .. |
| ೧೧೮ | ೧೨ ವರ್ಷಗಳ ಕಾಲ ಉಪವಾಸ ಮಾಡಿದರೆ ಬರುವ ಫಲ ಇದರಿಂದ ಬರುತ್ತದೆ . | ವಿಷ್ಣುಪಾದೋದಕ ಪ್ರಾಶನದಿಂದ | ೧೪ | ೨೯ | .. |
| ೧೧೯. | ಬ್ರಹ್ಮಸೂತ್ರಭಾಷ್ಯದ ಪ್ರವಚನವನ್ನು ಮಾಡುತ್ತಿದ್ದಾಗ ಮಧ್ವಾಚಾರ್ಯರ ಜೊತೆ ೧೫ ದಿನಗಳ ಕಾಲ ವಾದ ಮಾಡಿದ ವಿದ್ವಾಂಸರು ಯಾರು? | ತ್ರಿವಿಕ್ರಮ ಪಂಡಿತ ಆಚಾರ್ಯರು | ೧೫ | ೬೯ | ಮುಖಾಮುಖಿ |
| ೧೨೦. | ತ್ರಿವಿಕ್ರಮಪಂಡಿತಾಚಾರ್ಯರ ಪ್ರಾರ್ಥನೆಯಂತೆ ಶ್ರೀಮದ್ವಾಚಾರ್ಯರು ರಚಿಸಿದ ಗ್ರಂಥ ಯಾವುದು ? | ಅನುವ್ಯಾಖ್ಯಾನ | ೧೫ | ೮೮ | .. |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ | |
|---|---|---|---|---|---|
| ೧೨೧. | ಅನುವ್ಯಾಖ್ಯಾನದ ಯುಕ್ತಿಗಳನ್ನು ತಿಳಿಸಲು ಸ್ವಯಂ ಶ್ರೀಮದಾಚಾರ್ಯರೇ ರಚಿಸಿದ ಮತ್ತೊಂದು ಕೃತಿ ಯಾವುದು? | ನ್ಯಾಯವಿವರಣ | ೧೫ | ೯೦ | .. |
| ೧೨೨. | ಶ್ರೀಮಧ್ವಾಚಾರ್ಯರ ಶಿಷ್ಯರಲ್ಲಿ ಯಾರ ಮಹಿಮೆಯನ್ನು ಪೂರ್ಣವಾಗಿ ಹೇಳಲು ಗ್ರಂಥಕಾರರು ಸೋತಿದ್ದಾರೆ ? | ವಿಷ್ಣು ತೀರ್ಥರ | ೧೫ | ೧೧೩ | .. |
| ೧೨೩. | ಮನುಷ್ಯರಿಗೆ ಹೋಗಲು ಅಸಾಧ್ಯವಾದ ಯಾವ ಪರ್ವತಕ್ಕೆ ಶ್ರೀ ವಿಷ್ಣುತೀರ್ಥರು ಹೋದರು ? | ಕುಮಾರ ಪರ್ವತ | | ೧೧೯ | .. |
| ೧೨೪. | ಲಿಕುಚ ಕುಲದವರಲ್ಲಿದ್ದ ವಿಶೇಷವಾದ ಒಂದು ದೀಕ್ಷೆ ಯಾವುದು ? | ಯಾವ ಕಾರಣಕ್ಕೂ ಮಧ್ವಾಚಾರ್ಯರ ಆದೇಶವನ್ನು ಮೀರಬಾರದು | | ೧೩೬ | .. |
| ೧೨೫. | ರಾತ್ರಿಯ ಹೊತ್ತು ದೀಪ ಶಾಂತವಾದಾಗ ಯಾವ ಪ್ರಕಾಶದಿಂದ ಶ್ರೀಮಧ್ವಾಚಾರ್ಯರು ಪಾಠವನ್ನು ಮಾಡಿದರು ? | ಕಾಲಿನ ಹೆಬ್ಬರಳಿನ ಉಗುರಿನ ತುದಿಯಿಂದ | ೧೬ | ೬ | ಶ್ರೀಮಧ್ವಾಚಾರ್ಯರ ತೇಜಸ್ಸು |
| ೧೨೬. | ಶ್ರೀಮಧ್ವಾಚಾರ್ಯರ ದೃಷ್ಟಿಯಿಂದ ಅಬ್ಬರದ ಸಮುದ್ರವು ಕೆರೆಯಂತೆ ಶಾಂತವಾದದ್ದು ಎಲ್ಲಿ ? | ಕಣ್ವತೀರ್ಥ | ೧೬ | ೨೩ | .. |
| ೧೨೭. | ಶ್ರೀಮಧ್ವಾಚಾರ್ಯರು ಗ್ರೀಷ್ಮಕಾಲದಲ್ಲಿ ಮಳೆಯನ್ನು ತರಿಸಿದ ಸ್ಥಳ ಯಾವುದು ? | ಸರಿದಂತರ (ಇಡೇತುದೆ) | ೧೬ | ೩೮ | .. |
| ೧೨೮. | ಮಧ್ವಾಚಾರ್ಯರು ಯಾವ ಪಾಠವನ್ನು ಮಾಡುತ್ತಿದ್ದಾಗ ದೇವತೆಗಳು ಪುಷ್ಪವೃಷ್ಟಿಯನ್ನು ಮಾಡಿದರು ? | ಐತರೇಯೋಪನಿಷತ್ತು | ೧೬ | ೫೪ | .. |

## ಲಿಕುಚಕುಲಪಂಡಿತಾಚಾರ್ಯ ಪರೀಕ್ಷೆ 2024-2025
## ಕೃಷ್ಣಮಾಲಾದ ಪ್ರಶ್ನಮಾಲಿಕೆ

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ |
|---|---|---|---|
| 1. | ಕೃಷ್ಣಮಾಲಾದಲ್ಲಿ ಸಂಗ್ರಹಿಸಿದ ವಿಷಯಗಳು ಯಾವ ಗ್ರಂಥಗಳಿಂದ ಆರಿಸಲ್ಪಟ್ಟಿವೆ? | ಭಾಗವತ, ಹರಿವಂಶ, ಮಹಾಭಾರತತಾತ್ಪರ್ಯನಿರ್ಣಯ, ಮಹಾಭಾರತ. | |
| 2. | 'ಭಗವಾನ್' ಶಬ್ದದ ಅರ್ಥವೇನು? | ಐಶ್ವರ್ಯ, ವೀರ್ಯ, ಯಶಸ್ಸು, ಸಂಪತ್ತು, ಜ್ಞಾನ, ವಿಜ್ಞಾನ ಎಂಬ 6 ಗುಣಗಳನ್ನು ಸಂಪೂರ್ಣವಾಗಿ ಹೊಂದಿದವನು, ಅಂದರೆ ನಾರಾಯಣ ಒಬ್ಬನೇ. | (1) |
| 3. | 'ವೃಂದಾರಕರು' ಯಾರು? ದುಷ್ಟರ ನಿರ್ಮೂಲನೆಗೆ ಯಾರ ಬೇಡಿಕೆಗೆ ಭಗವಂತ ಅವತರಿಸಿದ? | ದೇವತೆಗಳು. ದೇವತೆಗಳ. | (1) |
| 4. | ವಸುದೇವ ಕಾರಾಗೃಹಕ್ಕೆ ತಂದಂತಹ ನಂದಗೋಪನ ಮಗಳು ಯಾರು?' | ದುರ್ಗಾದೇವಿ. | (1) |
| 5. | ಸತ್ವಗುಣ, ರಜೋಗುಣ, ತಮೋಗುಣಕ್ಕೆ ಅಭಿಮಾನಿಯಾದ ಲಕ್ಷ್ಮೀಯ 3 ರೂಪಗಳಾವುವು? | ಶ್ರೀದೇವಿ, ಭೂದೇವಿ, ದುರ್ಗಾದೇವಿ. | (1) |
| 6. | 'ಭೂಮ' ಶಬ್ದದ ಅರ್ಥವೇನು? | ಗುಣಪೂರ್ಣ. | (2) |
| 7. | 'ಶಕಟ' ಶಬ್ದದ ಅರ್ಥವೇನು? ಕೃಷ್ಣನ ಉಪನಿಷ್ಕ್ರಮಣ ದಿನದಂದು ಶಕಟಾಸುರನನ್ನು ಕೃಷ್ಣ ಹೇಗೆ ಸಂಹರಿಸಿದ? | 'ಬಂಡಿ'. ಕಾಲಿನಿಂದ ಒದ್ದು ಸಂಹರಿಸಿದ. | (2) |
| 8. | ಕೃಷ್ಣ ಪೂತನಿ ರಾಕ್ಷಸಿಯನ್ನು ಸಂಹಾರ ಮಾಡಿದಾಗ, ಅವಳೊಳಗಿದ್ದ ಎರಡು ಜೀವಗಳಾವುವು? ಅವರಿಗೇನಾಯಿತು? | 'ತಾಟಕಿ' ರಾಕ್ಷಸಿ ಅಂಧಂತಮಸ್ಸು ಎಂಬ ನಿತ್ಯನರಕಕ್ಕೆ ಹಾಗೂ 'ಊರ್ವಶಿ' ಎಂಬ ಅಪ್ಸರೆ ಸ್ವರ್ಗಕ್ಕೆ ಹೋದಳು. | (2) |
| 9. | ಕೃಷ್ಣನ ಅಣ್ಣ ಯಾರು? ಅವನು ಯಾರ ಅವತಾರ? ಅವನ ತಾಯಿ–ತಂದೆ ಯಾರು? | ಬಲರಾಮ. ಶೇಷ. (ಕೃಷ್ಣನ ಶುಕ್ಲಕೇಶದ ಆವೇಶ) ರೋಹಿಣಿ–ವಸುದೇವ. | (3) |
| 10. | ಸುಂಟರಗಾಳಿ ರೂಪದಲ್ಲಿ ಬಂದು, ಯಶೋದೆಯ ಕಣ್ಣಿಗೆ ಮಣ್ಣು ಎರಚಿ, ಕೃಷ್ಣನನ್ನು ಮೇಲಕ್ಕೆ ಕರೆದೊಯ್ದು ಕೊಲ್ಲಲು ಬಂದ ಅಸುರ ಯಾರು? | ತೃಣಾವರ್ತ. | (3) |
| 11. | ವಸುದೇವನು ಕೃಷ್ಣನ ನಾಮಕರಣ ಮಾಡಲು ನಂದಗೋಪನ ಮನೆಗೆ ಯಾರನ್ನು ಕಳುಹಿಸಿದನು? | ಗರ್ಗಾಚಾರ್ಯ. | (4) |
| 12. | 'ಕೃಷ್ಣ' ಪದದ ಸಾಮಾನ್ಯ ಅರ್ಥವೇನು? | ಭಕ್ತರನ್ನು ತನ್ನ ಕಡೆ ಸೆಳೆಯುವವನು (ಕರ್ಷತಿ ಇತಿ ಕೃಷ್ಣಃ) | (4) |
| 13. | ಕಟ್ಟಿ ಹಾಕಿದ ಒರಳನ್ನು ಕೃಷ್ಣನು ಎಳೆದುಕೊಂಡು ಅರ್ಜುನ ವೃಕ್ಷಗಳ ನಡುವೆ ಕೊಂಡು ಹೋದಾಗ, ಆ ಬಿದ್ದ ವೃಕ್ಷದಿಂದ ಶಾಪವಿಮೋಚನೆಗೊಂಡ ಕುಬೇರನ ಮಕ್ಕಳಾರು? ಹಾಗೂ ಅದರಲ್ಲಿ ಸೇರಿಕೊಂಡಿದ್ದ ದೈತ್ಯರು ಯಾರು? | ಮಣಿಗ್ರೀವ, ನಲಕೂಬರ. ದುನಿ, ಚಮು ದೈತ್ಯರು. | (4) |
| 14. | ನಂದಗೋಕುಲದ ಪ್ರಜೆಗಳನ್ನು ಬೃಂದಾವನಕ್ಕೆ ತೆರಳಲು ಕೃಷ್ಣನು ಅವರನ್ನು ಹೆದರಿಸಲು ಮಾಡಿದ ಉಪಾಯವೇನು? | ತನ್ನ ದೇಹದ ರೋಮಕೂಪದಿಂದ ತನ್ನದೇ ಆದ ಸಾವಿರಾರು ತೋಳಗಳ ರೂಪವನ್ನು ಸೃಷ್ಟಿಸಿ, ಭಯಪಡಿಸಿ ಅಲ್ಲಿಂದ ತೆರಳಿಸಿದ. | (4) |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ |
|---|---|---|---|
| 15. | ಕರು, ಬಕಪಕ್ಷಿ, ಕತ್ತೆ, ಕುದುರೆ ರೂಪಗಳಿಂದ ಬಂದ ಅಸುರರು ಯಾರು? | ವತ್ಸಾಸುರ, ಬಕಾಸುರ, ಧೇನುಕಾಸುರ, ಕೇಶಿ. | (4) |
| 16. | ಯಮುನೆಯ ಮಡುವಿನಲ್ಲಿ ಇದ್ದ ಕಾಳೀಯನನ್ನು ಕೃಷ್ಣ ಎಲ್ಲಿಗೆ ಕಳುಹಿಸಿದ? | ರಮಣಕದ್ವೀಪ. | (5) |
| 17. | ಹಸುಗಳನ್ನು ಮೇಯಿಸುವ ಸಮಯದಲ್ಲಿ ಆವರಿಸಿದ ಕಾಡ್ಗಿಚ್ಚನ್ನು ಕೃಷ್ಣ ಹೇಗೆ ಪರಿಹರಿಸಿದ? | ಗೋಪಾಲಕರಿಗೆ ಕಣ್ಣು ಮುಚ್ಚಲು ಹೇಳಿ, ಕಾಡ್ಗಿಚ್ಚನ್ನು ನುಂಗಿದನು. | (5) |
| 18. | ವಿಷವೃಕ್ಷದ ರೂಪದಲ್ಲಿ, ತನ್ನ ವಿಷದ ಗಾಳಿಯಿಂದ ಸುಮಾರು ಗೋವುಗಳನ್ನು ಸಂಹರಿಸಿದ ದೈತ್ಯ ಯಾರು? | ಉಗ್ರಾಸುರ. | (5) |
| 19. | ಕುಂಭಕನ ಮಗಳಾದ ನೀಲೆ ಏನೆಂದು ವರ ಪಡೆದಿದ್ದಳು? | ಕೃಷ್ಣನ ಉಪನಯನದ ಮುಂಚೆಯೇ ತನ್ನನ್ನು ಮೊದಲು ಮದುವೆಯಾಗಬೇಕೆಂದು. | (5) |
| 20. | ನೀಲೆಯನ್ನು ಸ್ವಯಂವರದಲ್ಲಿ ಕೃಷ್ಣ ಹೇಗೆ ಗೆದ್ದ? | ಶಿವನ ವರದಿಂದ ಅವಧ್ಯರಾದ ಕಾಲನೇಮಿ(ಕಂಸ)ಯ ಮಕ್ಕಳಾದ 7 ಗೂಳಿಗಳನ್ನು ಸಂಹರಿಸಿ ನೀಲೆಯನ್ನು ಪಡೆದ. | (5) |
| 21. | ಮಕ್ಕಳ ಜೊತೆಗೆ ಆಟವಾಡುವ ನೆಪದಲ್ಲಿ ಬಂದ ರಾಕ್ಷಸ ಯಾರು? ಕೃಷ್ಣ ಅವನನ್ನು ಯಾರಿಂದ ಕೊಲ್ಲಿಸಿದ? | ಪ್ರಲಂಬಾಸುರ. ಬಲರಾಮನಿಂದ (ಕೃಷ್ಣನ ಶುಕ್ಲಕೇಶದ ಆವೇಶ). | (6) |
| 22. | ಯಜ್ಞ ಮಾಡುವ ಬ್ರಾಹ್ಮಣರ ಬಳಿಗೆ ತೆರಳಿದ ಗೋಪಾಲಕರ ಹಸಿವೆ ನಿವಾರಣೆ ಆಗದಾಗ, ಕೃಷ್ಣನು ಅವರನ್ನು ಪುನಃ ಯಾರ ಬಳಿ ಕಳುಹಿಸಿದ? | ಬ್ರಾಹ್ಮಣರ ಪತ್ನಿಯರ ಬಳಿ. | (6) |
| 23. | ಪ್ರಳಯಕಾಲದ ಸಂವರ್ತಕ ಮೋಡದಿಂದ ಸುರಿಯುವ ಘೋರವಾದ ಮಳೆಯಿಂದ, ಗೋಪಾಲಕರನ್ನು ಕಾಪಾಡಲು ಕೃಷ್ಣ ಯಾವ ಪರ್ವತವನ್ನೆತ್ತಿದ? ಆಗ ತನ್ನ ತಪ್ಪನ್ನರಿತ ಇಂದ್ರ ಕೃಷ್ಣನಿಗೆ ಯಾವ ಗೋವಿನ ಹಾಲಿನಿಂದ ಅಭಿಷೇಕ ಮಾಡಿದ ಹಾಗೂ ಕೃಷ್ಣನನ್ನು ಏನೆಂದು ಕರೆದ? | ಗೋವರ್ಧನ. ಸುರಭಿ. ಗೋವಿಂದ. | (6) |
| 24. | ಗೋಪಿಕೆಯರು ಕಾತ್ಯಾಯನಿ ವ್ರತ ಯಾಕೆ ಮಾಡಿದರು? ಕೃಷ್ಣ ಅವರಿಗೆ ಏನನ್ನು ಕರುಣಿಸಿದ? ಆಗ ಸರಿ ಸುಮಾರು ಕೃಷ್ಣನ ವಯಸ್ಸೆಷ್ಟು? | ಕೃಷ್ಣನನ್ನು ಗಂಡನನ್ನಾಗಿ ಪಡೆಯಲು. 10 ಲಕ್ಷ ಮಕ್ಕಳನ್ನು ಕರುಣಿಸಿದ. 8–10 ವರ್ಷ. | (7) |
| 25. | ಶಂಖಚೂಡ ಯಾರು? ಅವನು ಏನನ್ನು ಧರಿಸಿದ್ದ ಹಾಗೂ ಯಾರನ್ನು ಅಪಹರಿಸಿದ? | ರುದ್ರನ ಮಿತ್ರ ಕುಬೇರನ ಸೇವಕ. ಶಂಖಚೂಡಾಮಣಿ. ಗೋಪಿಕೆಯರನ್ನು ಅಪಹರಿಸಿ ಗುಹೆಯಲ್ಲಿ ಬಂಧಿಸಿದ. | (7) |
| 26. | ಕೃಷ್ಣನು ನಂದನನ್ನು ಹೆಬ್ಬಾವಿನಿಂದ ಕಾಪಾಡಿದ. ಆ ಹಾವಿನ ಮೂಲರೂಪ ಯಾವುದು? ಅದರ ಶಾಪವಿಮೋಚನೆ ಹೇಗಾಯಿತು? | ಸುದರ್ಶನ ಗಂಧರ್ವ. ಕೃಷ್ಣನ ಪಾದಸ್ಪರ್ಶದಿಂದ | (8) |
| 27. | ಸಾಧನದ್ವಾದಶಿಯಂದು ವರುಣನ ದೂತರು ನಂದನನ್ನು ಏಕೆ ಬಂಧಿಸಿದರು | ಅಕಾಲ ಸಮಯದಲ್ಲಿ ನದಿಯಲ್ಲಿ ಸ್ನಾನಮಾಡಿದ. | (8) |
| 28. | ವ್ಯೋಮಾಸುರ ಯಾರು? ಏನು ಅಪರಾಧ ಮಾಡಿದ? | ದೈತ್ಯ ಮಯಾಸುರನ ಮಗ. ಗೋಪಾಲಕರನ್ನು ಗುಹೆಯಲ್ಲಿ ಅಡಗಿಸಿದ್ದ. | (8) |
| 29. | ಕಂಸನು ಕೃಷ್ಣನನ್ನು ಕರೆತರಬೇಕೆಂದು ಬೃಂದಾವನಕ್ಕೆ ಯಾರನ್ನು ಕಳುಹಿಸಿದ? ಕೃಷ್ಣನು ಅವನಿಂದ ಏನನ್ನು ಕೇಳಿ ತಿಳಿದ? | ಅಕ್ರೂರ. ಕಂಸನ ಕುಟಿಲನೀತಿಯನ್ನು. | (8) |
| 30. | ಕೃಷ್ಣಮಾಲಾದಲ್ಲಿ ನಾರಾಯಣಪಂಡಿತಾಚಾರ್ಯರು ಮಥುರೆಗೆ ಪ್ರವೇಶಿಸಿದ ಕೃಷ್ಣ ಧರಿಸಿದ ನಿರ್ಮಲ ಬಟ್ಟೆಯನ್ನು ಯಾಕೆ ಸೂಚಿಸಿದರು? | ಅಗಸನ ರೂಪದಲ್ಲಿ, ಪಾರ್ವತಿಯ ವರ ಪಡೆದ ದೈತ್ಯನನ್ನು ಕೃಷ್ಣ ಸಂಹರಿಸಿ ಅವನ ಬಳಿ ಇದ್ದ ಕಂಸರಾಜನ ನಿರ್ಮಲ ಬಟ್ಟೆಯನ್ನು ಕೃಷ್ಣ ಧರಿಸಿದ. | (9) |
| 31. | ಕೃಷ್ಣಮಾಲಾದಲ್ಲಿ ನಾರಾಯಣಪಂಡಿತಾಚಾರ್ಯರು ಮಥುರೆಗೆ ಪ್ರವೇಶಿಸಿದ ಕೃಷ್ಣ ಗಂಧವನ್ನು ಪೂಸಿಕೊಳ್ಳುವ ವಿಷಯವನ್ನು ಯಾಕೆ ಪ್ರಸ್ತಾವ ಮಾಡಿದರು? | ಕುಬ್ಜೆಗೆ(ತ್ರಿವಕ್ರೆ) ಅನುಗ್ರಹಿಸಿದ ಲೀಲೆ ತಿಳಿಸಲು. | (9) |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ |
|---|---|---|---|
| 32. | ಮಥುರೆಗೆ ಪ್ರವೇಶಿಸಿದ ಕೃಷ್ಣ ಧರಿಸಿದ ವನಮಾಲೆಯ ಹಿನ್ನಲೆ ಏನು? | ಇಂದ್ರನು ಕಳುಹಿಸಿದ ಹೂಮಾರುವ ಸುದಾಮ ಕೃಷ್ಣನಿಗೆ ಸಮರ್ಪಿಸಿದ ವನಮಾಲೆ. | (9) |
| 33. | ಕೃಷ್ಣನನ್ನು ಕೊಲ್ಲಲು ಕಂಸ ಕಳುಹಿಸಿದ ಆನೆ ಹಾಗೂ ಮಲ್ಲರ ಹೆಸರೇನು? ಆ ದೈತ್ಯ ಆನೆಯನ್ನು ಕಂಸನಿಗೆ ನೀಡಿದವರು ಯಾರು? | ಕುವಲಯಾಪೀಡ ಆನೆ. ಮುಷ್ಟಿಕ–ಚಾಣೂರ ಮಲ್ಲರು. ಜರಾಸಂಧ. | (10) |
| 34. | ಕಂಸನ ಹೆಂಡತಿಯರಾದ ಅಸ್ತಿ–ಪ್ರಾಸ್ತಿ ಯಾರ ಮಕ್ಕಳು? | ಜರಾಸಂಧ. | (10) |
| 35. | ಕೃಷ್ಣ–ಕುಬ್ಜೆಯರ ಮಗ ಯಾರು? ಅವನು ಯಾರಿಗೆ ಸಾರಥಿಯಾದ? | ವಿಶೋಕ. ಭೀಮಸೇನ. | (11) |
| 36. | ಕಂಸನ ಬಂಧನದಲ್ಲಿದ್ದ ಅವನ ತಂದೆ ಯಾರು? ಕಂಸನ ಸಂಹಾರದ ನಂತರ ಕೃಷ್ಣ ರಾಜ್ಯವನ್ನು ಯಾರಿಗೆ ಹಸ್ತಾಂತರಿಸಿದನು? | ಉಗ್ರಸೇನ. ಉಗ್ರಸೇನ. | (11) |
| 37. | ಮೂಲತಃ ಅವಂತೀ ಪ್ರದೇಶದ ಸಾಂದೀಪನಿ ಋಷಿಗಳು, ಕಾಶೀನಗರದಲ್ಲಿ ಕಲಿತ ಎಷ್ಟು ವಿದ್ಯೆ ಹಾಗೂ ಎಷ್ಟು ದಿನಗಳಲ್ಲಿ ಕೃಷ್ಣನಿಗೆ ಸಮರ್ಪಿಸಿದರು? | 64 ವಿದ್ಯೆ. 64 ದಿನಗಳಲ್ಲಿ. | (12) |
| 38. | ಸಾಂದೀಪನಿ ಋಷಿಗಳ ಮಗನನ್ನು ಪ್ರಭಾಸಕ್ಷೇತ್ರದಲ್ಲಿ ಯಾರು ನುಂಗಿದರು? | ತಿಮಿಂಗಿಲ ರೂಪದಲ್ಲಿ ಬಂದ ಪಂಚಜನ ಎಂಬ ಅಸುರ. | (12) |
| 39. | ಕೃಷ್ಣನು ಸಾಂದೀಪನಿ ಋಷಿಗಳಿಗೆ ಏನನ್ನು ಗುರುದಕ್ಷಿಣೆಯಾಗಿ ನೀಡಿದ? | ಪಂಚಜನ ಅಸುರನಿಂದ ನುಂಗಲ್ಪಟ್ಟ ಮಗನನ್ನು ಬದುಕಿಸಿ ಗುರುಗಳಿಗೆ ನೀಡಿದನು. | (12) |
| 40. | ದೈತ್ಯ ಜರಾಸಂಧನ ಸೈನ್ಯ ಎಷ್ಟು ದೊಡ್ಡದು ಹಾಗೂ ಅವನು ಕೃಷ್ಣನನ್ನು ಎಷ್ಟು ಬಾರಿ ಎದುರಿಸುತ್ತಾನೆ? | 23 ಅಕ್ಷೋಹಿಣಿ ಸೈನ್ಯ. 18 ಬಾರಿ. | (12) |
| 41. | ಬಲರಾಮನ ಜೊತೆ ಕೃಷ್ಣ ಗೋಮಂತ ಪರ್ವತಕ್ಕೆ ತೆರಳಿದಾಗ ಯಾರನ್ನು ಕಂಡು ಏಕಾಂತದಲ್ಲಿ ಮಂತ್ರಾಲೋಚನೆ ಮಾಡಿದನು? | ಪರಶುರಾಮ. | (13) |
| 42. | ಬಲಿಯು ಕದ್ದು ಒಯ್ದ ನಾರಾಯಣನ ಕಿರೀಟವನ್ನು ಗರುಡನು ತಂದು ಗೋಮಂತ ಪರ್ವತದಲ್ಲಿದ್ದ ಕೃಷ್ಣನ ತಲೆಗಿಟ್ಟಾಗ, ನಾವು ತಿಳಿಯಬೇಕಾದ ಅಂಶವೇನು? | ನಾರಾಯಣನಿಗೂ ಕೃಷ್ಣನಿಗೂ ಭೇದವಿಲ್ಲ. | (13) |
| 43. | ವಿದರ್ಭ ದೇಶದಲ್ಲಿ ರಾಜರ ಸಮುದಾಯ ಯಾವುದಕ್ಕಾಗಿ ಒಟ್ಟಾಗಿತ್ತು? ಆಗ ಇಂದ್ರ ಅವರನ್ನು ಬೆದರಿಸಿದಾಗ ರಾಜರು ಏನು ಮಾಡಿದರು? | ಕೃಷ್ಣನನ್ನು ಅವಮಾನಿಸುವುದಕ್ಕಾಗಿ. (ದೈತ್ಯರಾಜರನ್ನು ಹೊರತು) ಎಲ್ಲರೂ ಕೃಷ್ಣನಿಗೆ ಶರಣಾಗತರಾಗಿ ಅಭಿಷೇಕ ಮಾಡಿದರು. | (14) |
| 44. | ಹಗಲು–ರಾತ್ರಿ ನಿದ್ದೆ ಮಾಡದೇ ಕೃಷ್ಣನನ್ನು ಕಾಯುತ್ತಿದ್ದ ಗೋಪ–ಗೋಪಿಕೆಯರನ್ನು ಸಮಾಧನ ಪಡಿಸಲು ಕೃಷ್ಣ ಯಾರನ್ನು ಕಳುಹಿಸಿದ? | ಉದ್ಧವ. | (13) |
| 45. | ಅಕ್ರೂರನ ಮೂಲ ರೂಪ ಯಾವುದು? | ಬ್ರಹ್ಮನ ಆವೇಶದಿಂದ ಕೂಡಿದ ಕಿಶೋರ ಎಂಬ ಗಂಧರ್ವ. | (13) |
| 46. | ಗೋಮಂತ ಪರ್ವತಕ್ಕೆ ಯಾರು ಬೆಂಕಿ ಹಾಕಿದರು? | ಜರಾಸಂಧ, ಶಿಶುಪಾಲ ಮುಂತಾದವರು. | (13) |
| 47. | ಸೃಗಾಲವಾಸುದೇವ ದೈತ್ಯ ಎಲ್ಲಿಯವನು? ಅವನ ತಂದೆ–ತಾಯಿ ಯಾರು? | ಕೊಲ್ಲಾಪುರ. ವಸುದೇವ–ಧನು. | (13) |
| 48. | ಕೃಷ್ಣ ದ್ವಾರಕೆಯನ್ನು ಯಾಕೆ ನಿರ್ಮಿಸಿದ? | ತನ್ನ ಮಥುರೆಯ ಭಕ್ತರಿಗೆ ಜರಾಸಂಧನ ಉಪದ್ರವದಿಂದ ಮುಕ್ತಿ ಕೊಡಲು. | (14) |
| 49. | ಗರ್ಗಾಚಾರ್ಯರು ಕೃಷ್ಣನನ್ನು ಕೊಲ್ಲುವ ಉದ್ದೇಶದಿಂದ ತಪಸ್ಸು ಮಾಡಿ ಪಡೆದ ಮಗ ಯಾರು? | ಕಾಲಯವನ. | (14) |
| 50. | ತ್ರೇತಾಯುಗದ ರೇವತಿಯ ತಂದೆ ರೇವತರಾಜ ಬ್ರಹ್ಮಲೋಕಕ್ಕೆ ಯಾಕೆ ಹೋದ? ದ್ವಾಪರಯುಗದಲ್ಲಿ ಯಾರನ್ನು ಅಳಿಯನಾಗಿ ಪಡೆದ? | ರೇವತಿಗೆ ಯೋಗ್ಯ ವರ ಕೇಳಲು. ಬಲರಾಮ. | (15) |
| 51. | ರುಗ್ಮಿಣಿ, ಸತ್ಯಭಾಮೆಯರ ತಂದೆಯಂದಿರು ಯಾರು? | ಭೀಷ್ಮಕ. ಸತ್ರಾಜಿತ. | (15) |
| 52. | ಪ್ರದ್ಯುಮ್ನ ಹಾಗೂ ಸಾಂಬರ ತಂದೆ–ತಾಯಿಯಂದಿರು ಯಾರು? | ಕೃಷ್ಣ–ರುಕ್ಮಿಣಿ. ಕೃಷ್ಣ–ಜಾಂಬವತಿ. | (15) |
| 53. | ಜಾಂಬವಂತನ ಹಾಗೂ ಕೃಷ್ಣನ ನಡುವೆ ಎಷ್ಟು ದಿನ ಯುದ್ಧ ನಡೆಯಿತು? | 21 ದಿನ. | (15) |
| 54. | ಸತ್ರಾಜಿತ ಸ್ಯಮಂತಕಮಣಿಯನ್ನು ಹೇಗೆ ಪಡೆದಿದ್ದನು? | ಸೂರ್ಯ(ಸೂರ್ಯನಾರಾಯಣ)ನ ಉಪಾಸನೆಯಿಂದ. | (16) |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ |
|---|---|---|---|
| 55. | ವಿಚಕ್ರ ಯಾರ ದೂತನಾಗಿ ಬಂದ ಹಾಗೂ ಯಾರೊಡನೆ ಹೋರಾಡಿದ? | ಹಂಸ, ಡಿಭಕ. ಕೃಷ್ಣ. | (16) |
| 56. | ಸಾಲ್ವರಾಜನ(ಬ್ರಹ್ಮದತ್ತ) ಮಕ್ಕಳಾರು? ಆ ಮಕ್ಕಳನ್ನು ಕೃಷ್ಣ ಎಲ್ಲಿಗೆ ತಳ್ಳಿದ? ಬ್ರಹ್ಮದತ್ತನನ್ನು ಯಾರು ಕೊಂದರು? | ಹಂಸ, ಡಿಭಕ. ತಮಸ್ಸಿಗೆ. ಸಾತ್ಯಕಿ. | (16) |
| 57. | ಕೃಷ್ಣ ಯಾರು ಕಳುಹಿಸಿದ ಯಾವ ಭೂತಗಳನ್ನು ಕೈಲಾಸಕ್ಕೆ ತಳ್ಳಿದ? | ರುದ್ರ. ಮಹೋದರ, ಕುಂಡಧಾರಿ. | (16) |
| 58. | ಕೃಷ್ಣ ಗದಾಗ್ರಜ(ಗದನ ಅಣ್ಣ) ಅನ್ನಿಸಿಕೊಂಡ ಗದ ಯಾರು? ಅವನ ಮೂಲರೂಪ ಯಾವುದು? | ರೋಹಿಣಿಯ ಮಗ, ಬಲರಾಮ–ಸುಭದ್ರೆಯರ ಸಹೋದರ ಗದ. ಚಂಡ ಎನ್ನುವ ವಿಷ್ಣುವಿನ ದ್ವಾರಪಾಲಕ. | (16) |
| 59. | ದೇವರ ಹಾಗೂ ದೇವತೆಗಳ ಆರಾಧನೆ ದೇವತಾಕಕ್ಷತಾರತಮ್ಯದ ಪ್ರಕಾರವೇ ಸಲ್ಲಿಸಬೇಕು. ಅದರಲ್ಲಿಪರಶುಕ್ಲತ್ರಯರು (ದೋಷರಹಿತ ಕಕ್ಷೆ) ಯಾರು ಹಾಗೂ ಅವರ ಅಭೀಷ್ಟವನ್ನು ಯಾರು ಪೂರೈಸಿದರು? | ಲಕ್ಷ್ಮೀ, ಬ್ರಹ್ಮ, ವಾಯು, ಸರಸ್ವತಿ, ಭಾರತಿ. ಕೃಷ್ಣ. | (16) |
| 60. | ಭೀಮಾರ್ಜುನರು ದ್ರೋಣನಿಗೆ ಗುರುದಕ್ಷಿಣೆ ಹೇಗೆ ಸಲ್ಲಿಸಿದರು? ಆಗ ಕೃಷ್ಣ ಅವರನ್ನು ಅಭಿನಂದಿಸಲು ಯಾರನ್ನು ಕಳುಹಿಸಿದ? | ದ್ರುಪದನನ್ನು ಗೆದ್ದು, ಸೆರೆಹಿಡಿದು ಒಪ್ಪಿಸಿದರು. ಕೃತವರ್ಮ (ಹೃದಿಕನ ಮಗ ಹಾರ್ದಿಕ). | (17) |
| 61. | ಕೃಷ್ಣನು ಪಾಂಡವರಿಗೆ ಎಲ್ಲೆಲ್ಲಿ ಪಟ್ಟಾಭಿಷೇಕ ಮಾಡಿಸಿದ? | ಹಸ್ತಿನಾವತಿ, ಇಂದ್ರಪ್ರಸ್ಥ. | (17) |
| 62. | ಸತ್ಯಭಾಮೆಯ ತಂದೆಯಾದ ಸತ್ರಾಜಿತನನ್ನು ಕೊಂದವರಾರು? | ಶತಧನ್ವ. | (17) |
| 63. | ಕೃಷ್ಣ ಯಾರ ಬಳಿ ಇದ್ದ ಸ್ಯಮಂತಕ ಮಣಿಯನ್ನು ಬಲರಾಮನಿಗೆ ತೋರಿಸಿ ಅವನ ಸಂಶಯವನ್ನು ಪರಿಹರಿಸಿದ? | ಅಕ್ರೂರ. | (18) |
| 64. | ಕೃಷ್ಣನ ಅಷ್ಟಮಹಿಷಿ(ರಾಣಿ)ಯರಲ್ಲಿ ಒಬ್ಬಳಾದ ಕಾಳಿಂದಿ ಯಾರ ಮಗಳು? ಅವಳ ಇನ್ನೊಂದು ಹೆಸರೇನು? | ಸೂರ್ಯ. ಯಮುನಾ. | (18) |
| 65. | ನೀಲೆ ಎರಡು ರೂಪದಲ್ಲಿ ಹೇಗೆ ಬಂದಳು? | ಕುಂಭಕನ ಮಗಳು. ಆಮೇಲೆ ನಗ್ನಜಿತ್ತನ ಮಗಳು. | (18) |
| 66. | 7 ವರ್ಷದ ಕೃಷ್ಣ ನೀಲೆಯನ್ನು ಮದುವೆಯಾದ ಮೇಲೆ, ಮುಂದೆ ಕೃಷ್ಣ ಯಾವ 3 ಕನ್ಯೆಯರನ್ನು ಮದುವೆಯಾದ? | ಆವಂತಿ ದೇಶದ ಮಿತ್ರವಿಂದಾ, ಕೇಕಯ ದೇಶದ ರಾಜನ ಮಗಳು ಭದ್ರಾ, ಮದ್ರದೇಶದ ರಾಜನ ಮಗಳು ಲಕ್ಷಣಾ. | (18) |
| 67. | ಪಾಂಡವರು, ಕೌರವರು ಹಾಗೂ ಎಲ್ಲಾ ಅರಸರು ನೆರೆದಿದ್ದ ದ್ವಾರಕೆಯ ಸಭೆಯಲ್ಲಿ ಕೃಷ್ಣನೇ ಸರ್ವೋತ್ತಮ ಎಂದು ಬಾಯಿತುಂಬ ಕೊಂಡಾಡಿದವರಾರು? | ನಾರದರು. | (19) |
| 68. | ನರಕಾಸುರನ ತಂದೆ–ತಾಯಿ ಯಾರು? | ವರಾಹ–ಭೂಮಿದೇವಿ/ ಧರಾದೇವಿ. | (19) |
| 69. | ನರಕಾಸುರನ ಸೆರೆಯಲ್ಲಿದ್ದ ಯಾರನ್ನು ಕೃಷ್ಣ ಬಿಡಿಸಿದ ಹಾಗೂ ಹೇಗೆ ಸಂತೈಸಿದ? | 16,100 ರಾಜಕುಮಾರಿಯರು. ಅವರ ಕೋರಿಕೆಯ ಮೇಲೆ ಅವರನ್ನು ಮದುವೆಯಾಗಿ ಪ್ರತಿಯೊಬ್ಬರಲ್ಲಿ 10 ಗಂಡು ಮಕ್ಕಳು, 1 ಹೆಣ್ಣು ಮಗಳನ್ನು ನೀಡಿದ. | (20) |
| 70. | ಸುರಲೋಕ, ನಾಗಲೋಕಗಳನ್ನು ಗೆದ್ದು ಬಂದವರಾರು? | ಸಾಂಬ, ಪ್ರದ್ಯುಮ್ನ. | (20) |
| 71. | 16,100 ಕೃಷ್ಣನ ರಾಣಿಯರು ಮೂಲತಃ ಯಾರು? | ಕೃಷ್ಣನನ್ನು ಗಂಡನಾಗಿ ಪಡೆಯಬೇಕೆಂದು ತಪಸ್ಸು ಮಾಡಿದ ಅಗ್ನಿಪುತ್ರರು. | (20) |
| 72. | ಸುಭದ್ರೆ ರಾಮಾವತಾರದಲ್ಲಿ ಏನಾಗಿದ್ದಳು? | ರಾಮಾಯಣ ಕಾಲದ ಅಶೋಕವನದಲ್ಲಿ ಸೀತೆಯ ಸೇವೆ ಮಾಡಿದ ತ್ರಿಜಟೆ. | (21) |
| 73. | ಅರ್ಜುನನಿಗೆ ಕೃಷ್ಣ ಯಾರನ್ನು ಧಾರೆ ಎರೆದು ಕೊಟ್ಟ ಹಾಗೂ ಏನು ಉಡುಗೊರೆಯನ್ನಿತ್ತ? | ಸುಭದ್ರೆ, ಇಂದ್ರಪ್ರಸ್ಥಕ್ಕೆ ತೆರಳಿ ಅರ್ಜುನನಿಗೆ ಕೈತುಂಬ ಮುತ್ತುರತ್ನಗಳನ್ನಿತ್ತ. | (21) |
| 74. | ಪರಶುರಾಮನ ತಂದೆ–ತಾಯಿ ಯಾರು? | ಜಮದಗ್ನಿ–ರೇಣುಕಾ. | (22) |
| 75. | ಸ್ಯಮಂತಪಂಚಕತೀರ್ಥ ಎಲ್ಲಿದೆ? ಕೃಷ್ಣ ಪಂಚಕತೀರ್ಥದಲ್ಲಿ ಏನನ್ನು ಎಷ್ಟು ಸಮಯದಲ್ಲಿ ಮಾಡಿದ? | ಕುರುಕ್ಷೇತ್ರ. | (22) |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ |
|---|---|---|---|
| | | ಸುಮಾರು ಮೂರುವರೆ ವರ್ಷದಲ್ಲಿ ಮಾಡುವ ಅಶ್ವಮೇಧ ಯಾಗವನ್ನು ಒಂದೇ ದಿನದಲ್ಲಿ ಮಾಡಿದ. (ಎಲ್ಲಾ ಗ್ರಹಗಳಿಗೂ ಕೃಷ್ಣನೇ ಅಧಿಪತಿ) | |
| 76. | ಶಿಶುಪಾಲ, ದಂತವಕ್ರ, ಕಂಸ ಇವರಲ್ಲಿ ಆವಿಷ್ಟರಾದವರಾರು? | ಜಯ, ವಿಜಯ. ಭೃಗು. | (22) |
| 77. | ದುಷ್ಟ ಕ್ಷತ್ರಿಯರನ್ನು ಸಂಹರಿಸಿದ ಪರಶುರಾಮನು ಅವರ ಭೂಮಿಯನ್ನು ಯಾರಿಗೆ ದಾನ ಮಾಡಿದ? | ಕಶ್ಯಪ ಋಷಿ. | (22) |
| 78. | ದಂತವಕ್ರನನ್ನು ಕೃಷ್ಣ ಕೊಂದ ಸಂದರ್ಭದಲ್ಲಿ, ಕೃಷ್ಣನನ್ನು ಪ್ರವೇಶಿಸಿದ ಅವರ ಜೀವರನ್ನು ಕುರಿತು ಯಾರು ಪ್ರಶ್ನಿಸಿದ? | ಅರ್ಜುನ. | (23) |
| 79. | ಜರಾಳ ಮಗನಾದ ಜರಾಸಂಧನನ್ನು ಯಾರು ಕೊಂದರು? ಆಗ ಕೃಷ್ಣ ಹೇಗೆ ಅಭಿನಂದಿಸಿದ? | ಭೀಮ. ಬಿಗಿದಪ್ಪಿ ಅಭಿನಂದಿಸಿದ. | (23) |
| 80. | ಕೃಷ್ಣನು ಶಿವನನ್ನು ಕುರಿತು ಯಾಕೆ ತಪಸ್ಸು ಮಾಡಿ ಮಗನನ್ನು ಪಡೆದ? | ದುರ್ಜನರ ಮೋಹಕ್ಕಾಗಿ. | (23) |
| 81. | ಖಾಂಡವವನ ದಹನ ಮಾಡಿದ ಅರ್ಜುನನ ಅಹಂಕಾರವನ್ನು ಕೃಷ್ಣ ಹೇಗೆ ಪರಿಹರಿಸಿದ? | ಜರಾಸಂಧನ ಮೂಲಕ ಅವಮಾನ ಮಾಡಿಸಿ. | (23) |
| 82. | ಶಿಶುಪಾಲ, ದಂತವಕ್ರರ ಒಳಗಿರುವ ದ್ವಂದ್ವ ಜೀವಿಗಳಾರು? | ಶಿಶುಪಾಲ–ಜಯ ದ್ವಾರಪಾಲಕ, ಹಿರಣ್ಯಕಶಿಪು ದೈತ್ಯ.<br>ದಂತವಕ್ರ–ವಿಜಯ ದ್ವಾರಪಾಲಕ, ಹಿರಣ್ಯಾಕ್ಷ ದೈತ್ಯ. | (23) |
| 83. | ಶಿಶುಪಾಲ, ದಂತವಕ್ರರನ್ನು ಸಂಹರಿಸಿದಾಗ ಅವರ ಜೀವರಿಗೇನಾಯಿತು? | ದ್ವಾರಪಾಲಕರಾದ ಜಯ, ವಿಜಯ ಕೃಷ್ಣನ ಒಳಗೆ ಪ್ರವೇಶಿಸಿದರು. ದೈತ್ಯರಾದ ಹಿರಣ್ಯಾಕ್ಷ, ಹಿರಣ್ಯಕಶಿಪು ಅಂಧಂತಮಸ್ಸಿಗೆ (ನಿತ್ಯನರಕ) ಹೋದರು. | (23) |
| 84. | ಪೌಂಡ್ರಕ ವಾಸುದೇವ ಯಾರ ಮಗ ಹಾಗೂ ಯಾರ ರೂಪ? | ವಸುದೇವ–ಸುತನು (ಕಶ್ಯಪ–ದಿತಿ). ವೇನ. | (24) |
| 85. | ಕೈಲಾಸದಿಂದ ಮರಳಿ ಬಂದ ಕೃಷ್ಣ ಯಾರನ್ನು ಸೋಲಿಸಿ ಕೊಂದ? | ಪೌಂಡ್ರಕ ವಾಸುದೇವ ಎಂಬ ದೈತ್ಯ. | (24) |
| 86. | ಪೌಂಡ್ರಕ ವಾಸುದೇವನನ್ನು ಕೊಂದ ಮೇಲೆ ಕೃಷ್ಣನ ಕೈಯಿಂದ ಪ್ರಾಣ ಬಿಟ್ಟವರು ಯಾರು? | ಏಕಲವ್ಯ (ದ್ವಾರಕೆಯನ್ನು ಧ್ವಂಸ ಮಾಡಲು ಯತ್ನಿಸಿದ) ಹಾಗೂ ಕಾಶಿರಾಜನ ಮಗ ಸುದಕ್ಷಿಣ (ಕೃಷ್ಣನನ್ನು ಸಂಹರಿಸಲು ಯತ್ನಿಸಿದ). | (24) |
| 87. | ಕೃಷ್ಣನು ಪ್ರೇಮದ ಕಲಹ ನಡೆಸಿ ಯಾರೊಡನೆ ವಿನೋದ ಮಾಡಿದ? | ರುಗ್ಮಿಣೀ. | (24) |
| 88. | ಬಲರಾಮ ರೇವತಗಿರಿಯಲ್ಲಿ ಯಾರನ್ನು ಕೊಂದ? ಅವರ ಮೂಲರೂಪ ಯಾವುದು? | ತ್ರೇತಾಯುಗದ ಕಪಿಗಳಾದ ಮೈಂದ–ವಿವಿದ. ಅಶ್ವಿನಿದೇವತೆ. | (25) |
| 89. | ಜಾಂಬವತಿಯ ಮಗ ಸಾಂಬ ಯಾರನ್ನು ಅಪಹರಿಸಿದ? | ದುರ್ಯೋಧನನ ಮಗಳಾದ ಲಕ್ಷಣಾ. | (25) |
| 90. | ಸಾಂಬನನ್ನು ಬಂಧನದಲ್ಲಿಟ್ಟ ಕೌರವರನ್ನು ಬಲರಾಮ ಹೇಗೆ ಬೆದರಿಸಿದ? | ತನ್ನ ನೇಗಿಲಿನಿಂದ ಕುರುಪುರವನ್ನೇ (ಹಸ್ತಿನಾಪುರ) ಸೆಳೆದ | (25) |
| 91. | ಅನಿರುದ್ಧ ಯಾರು? ಅವನನ್ನು ಯಾರು ಸೆಳೆದೊಯ್ದರು? | ಕೃಷ್ಣನ ಮಗನಾದ ಪ್ರದ್ಯುಮ್ನನ ಮಗ. ಬಾಣಾಸುರನ ಮಗಳು ಉಷಾ. | (25) |
| 92. | ಅನಿರುದ್ಧನನ್ನು ಬಿಡಿಸಿಕೊಳ್ಳುವ ಸಮಯದಲ್ಲಿ ಏನಾಯಿತು? | ಬಾಣಾಸುರನನ್ನು ಹಾಗೂ ಅವನ ಪರವಾಗಿ ಹೋರಾಡಿದ ಅಗ್ನಿದೇವತೆಗಳನ್ನು ಕೃಷ್ಣ ಗೆದ್ದ. | (25) |
| 93. | ಏಕಲವ್ಯನ ಮೂಲರೂಪ ಯಾವುದು? | ಮಣಿಮಂತ ಎಂಬ ದೈತ್ಯ. | (25) |
| 94. | ಸುಭದ್ರೆಯ ಮಗನಾದ ಅಭಿಮನ್ಯುವಿಗೆ ಕೃಷ್ಣ ಯಾರ ಜೊತೆ ವಿವಾಹ ಮಾಡಿಸಿದ? | ವಿರಾಟನ ಮಗಳಾದ ಉತ್ತರಾ. | (26) |
| 95. | ಯುದ್ಧಕ್ಕೆ ಸಹಾಯ ಕೋರುತ್ತಾ ದ್ವಾರಕೆಗೆ ಬಂದ ಅರ್ಜುನ ಹಾಗೂ ದುರ್ಯೋಧನರಿಗೆ ಕೃಷ್ಣ ಏನು ಕರುಣಿಸಿದ? | ಅರ್ಜುನನ ಸಾರಥಿಯಾದ. ದುರ್ಯೋಧನನಿಗೆ 10 ಲಕ್ಷ ನಾರಾಯಣಿಸೈನ್ಯ ನೀಡಿದ. | (26) |
| 96. | ಯುದ್ಧವನ್ನು ಕೈಚೆಲ್ಲಿ ಬೇಸತ್ತು ಕುಳಿತ ಅರ್ಜುನನಿಗೆ ಕೃಷ್ಣನು ಯುದ್ಧದಲ್ಲಿ ತೊಡಗುವಂತೆ ಹೇಗೆ ಮಾಡಿದ? | ನಿಜವಾದ ತತ್ತ್ವ, ಸ್ವಧರ್ಮ ಆಚರಣೆಯ ಮಹತ್ತ್ವವನ್ನು ಭಗವದ್ಗೀತೆಯ ಮೂಲಕ ಉಪದೇಶಿಸಿ ವಿಶ್ವರೂಪವನ್ನು ತೋರಿಸಿದ. | (26) |
| 97. | 18 ಅಕ್ಷೋಹಿಣಿ ಸೈನ್ಯವನ್ನು ಕೃಷ್ಣ ತನ್ನ ಕುಡಿನೋಟದಿಂದ ಏನು ಮಾಡಿದ? | ಎಲ್ಲರ ಆಯುಷ್ಯವನ್ನು ಹೀರಿ ಕುಡಿದ. | (27) |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ |
|---|---|---|---|
| 98. | ಯುದ್ಧದಲ್ಲಿ ಧರ್ಮಕ್ಕೆ ಹೋರಾಡಿದ ಎಲ್ಲಾ ವೀರರು ಯಾವ ಗತಿಯನ್ನು ಪಡೆದರು? | ಕೃಷ್ಣನನ್ನೇ ನೋಡುತ್ತಾ ಉತ್ತಮ ಗತಿಯನ್ನು ಪಡೆದರು. | (27) |
| 99. | ಭೀಷ್ಮರ ಪ್ರತಿಜ್ಞೆಯನ್ನು ಕೃಷ್ಣ ಹೇಗೆ ಪೂರೈಸಿದ? | ಕೈಯಲ್ಲಿ ಚಕ್ರವನ್ನು ಹಿಡಿದು. | (28) |
| 100. | ಜಯದ್ರಥ ಮೊದಲಾದವರಿಂದ ಅಭಿಮನ್ಯು ಮರಣಗೈದಾಗ ಘಾಸಿಗೊಂಡ ಅರ್ಜುನನಿಗೆ ಕೃಷ್ಣ ಹೇಗೆ ಚಿಕಿತ್ಸೆ ನೀಡಿದ? | ಅರ್ಜುನನನ್ನು ಕನಸಿನಲ್ಲಿ ಶಿವನೆಡೆಗೆ ಕರೆದೊಯ್ದು ಪುನಃ ಪಾಶುಪತಾಸ್ತ್ರ ಉಪದೇಶಿಸಿದ. | (28) |
| 101. | ಕೃಷ್ಣನು ಅರ್ಜುನನಿಗೆ ತಾನು ಉಪದೇಶಿಸದೆ ರುದ್ರನ ಬಳಿ ಏಕೆ ಕರೆದೊಯ್ದ? | ಅರ್ಜುನ(ಮೂಲರೂಪ ಇಂದ್ರ)ನ ನಿಯತಗುರು ಶಿವ–ಪಾರ್ವತಿ. | (28) |
| 102. | ಕೃಷ್ಣನ ಶಂಖ ಯಾವುದು? ಅದರ ಶಬ್ದದಿಂದೇನಾಯಿತು? | ಪಾಂಚಜನ್ಯ. ಶತ್ರುಗಳಿಗೆ ಭಯವುಂಟಾಯಿತು. | (28) |
| 103. | ನರಕಾಸುರನ ಮಗನಾದ ಭಗದತ್ತನು ವೈಷ್ಣವಾಸ್ತ್ರ ಪ್ರಯೋಗಿಸಿದಾಗ ಏನಾಯಿತು? | ಅದು ಕೃಷ್ಣನ ಮೇಲೆ ವೈಜಯಂತಿಮಾಲೆ ಆಯಿತು. | (28) |
| 104. | ಶಿನಿಯ ಮೊಮ್ಮಗನಾದ ಯುಯುಧಾನನಿಗೆ ಮತ್ತೊಂದು ಹೆಸರೇನು? ಅವನನ್ನು ಯಾರಿಂದ ಕಾಪಾಡಿದ? | ಸಾತ್ಯಕಿ. ಭೂರಿಶ್ರವ. | (29) |
| 105. | ಕೃಷ್ಣನ ತಂತ್ರಗಾರಿಕೆಯಿಂದ ಜಯದ್ರಥನನ್ನು ಯಾರು ಕೊಂದರು? ಅವನ ತಲೆಯನ್ನು ಯಾರ ಮೇಲೆ ಬೀಳಿಸಿದ? | ಅರ್ಜುನ. ಜಯದ್ರಥನ ತಂದೆ ವೃದ್ಧಕ್ಷತ್ರನ ಮೇಲೆ. | (29) |
| 106. | ಪಾಂಡವ ಸೈನ್ಯವನ್ನು ಅಶ್ವತ್ಥಾಮನ ನಾರಾಯಣಾಸ್ತ್ರದಿಂದ ಕೃಷ್ಣ ಹೇಗೆ ಪಾರುಮಾಡಿದ? | ಶಸ್ತ್ರವನ್ನು ಬದಿಗಿಟ್ಟು ನಾರಾಯಣಾಸ್ತ್ರಕ್ಕೆ ನಮಿಸಲು ಹೇಳಿದ. | (29) |
| 107. | ಅಶ್ವತ್ಥಾಮನ ಬಾಣಗಳಿಂದ ಘಾಸಿಗೊಂಡ ಅರ್ಜುನನಲ್ಲಿ ಕೃಷ್ಣ ಹೇಗೆ ಬಲ ತುಂಬಿಸಿದ? | ತನ್ನ ಅಪ್ಪುಗೆಯಿಂದ. | (29) |
| 108. | ಧರ್ಮರಾಜ, ಅರ್ಜುನನಲ್ಲಿ ಬಂದ ವಿರೋಧವನ್ನು ಕೃಷ್ಣ ಯಾವ ನೀತಿಯಿಂದ ಪರಿಹರಿಸಿದ? | ಹಿರಿಯರನ್ನು ನಿಂದಿಸಿದರೆ ಅವರ ಕೊಲೆ ಮಾಡಿದ ಹಾಗೆ. ಆತ್ಮಪ್ರಶಂಸೆ ಮಾಡಿದರೆ ಆತ್ಮಹತ್ಯೆಗೈದ ಹಾಗೆ. | (29) |
| 109. | ಕರ್ಣನಿಗೆ ಯಾರ ಹಾಗೂ ಯಾವ ಶಾಪವಿತ್ತು? | ಪರಶುರಾಮನ ಶಾಪ. ಸ್ಪರ್ಧೆಯಿಂದ ಕರ್ಣ ಯುದ್ಧ ಮಾಡಿದರೆ ಅವನಿಗೆ ಪರಾಜಯ. | (30) |
| 110. | ಕರ್ಣನ ನಾಗಾಸ್ತ್ರದಿಂದ ಅರ್ಜುನನನ್ನು ಕೃಷ್ಣ ಹೇಗೆ ಕಾಪಾಡಿದ? | ರಥವನ್ನು 4 ಅಂಗುಲದಷ್ಟು ಕೆಳಕ್ಕೆ ತಳ್ಳಿದ. | (30) |
| 111. | ದುರ್ಯೋಧನನ ನಡು ಮುರಿದು ಬೀಳಿಸಿದ ಭೀಮನ ಯುದ್ಧದ ನಡೆಯನ್ನು ನೋಡಿ ಯಾರು ಭೀಮನನ್ನು ಹೊಗಳಿದರು, ಯಾರು ತೆಗಳಿದರು? | ಕೃಷ್ಣ ಹೊಗಳಿದ, ಬಲರಾಮ ತೆಗಳಿದ. | (30) |
| 112. | ದ್ರೋಣ ತನಯನಾದ ಅಶ್ವತ್ಥಾಮನನ್ನು ಕೃಷ್ಣ ಯಾಕೆ ಶಪಿಸಿದ? | ಅಭಿಮನ್ಯುವಿನ ಹೆಂಡತಿ ಉತ್ತರೆಯ ಗರ್ಭಕ್ಕೆ ಬ್ರಹ್ಮಶಿರೋಸ್ತ್ರ ಪ್ರಯೋಗಿಸಿದಕ್ಕೆ. | (30) |
| 113. | ಯುದ್ಧ ಮುಗಿದ ಮೇಲೆ ಕೃಷ್ಣ ಧರ್ಮರಾಜ್ಯವನ್ನು ಹೇಗೆ ಸ್ಥಾಪಿಸಿದ? | ಧರ್ಮರಾಜ(ಯುಧಿಷ್ಠಿರ)ನಿಗೆ ಪಟ್ಟಾಭಿಷೇಕ ಮಾಡಿ. | (30) |
| 114. | ಯುದ್ಧ ಮುಗಿದ ಮೇಲೆ, ಧರ್ಮರಾಜನಿಗೆ ತಾನು ಅಧರ್ಮ ಮಾಡಿದೆ ಎಂಬ ಭ್ರಾಂತಿಯನ್ನು ಕೃಷ್ಣ ಹೇಗೆ ಹೋಗಲಾಡಿಸಿದ? | ಭೀಷ್ಮನಿಂದ ಧರ್ಮರಾಜನಿಗೆ ಅನೇಕ ತತ್ತ್ವವನ್ನು ಉಪದೇಶಿಸಿದ. | (31) |
| 115. | ಕೃಷ್ಣ ಕಲಿಯನ್ನು ಯಾರ ಮೂಲಕ ನಿರ್ಬಂಧಗೊಳಿಸಿದ? | ಭೀಮನ. | (31) |
| 116. | ಯುದ್ಧ ಮುಗಿದ ಮೇಲೆ ಅರ್ಜುನನ ದುಃಖ ನಿವಾರಿಸಲು ಕೃಷ್ಣ ಏನು ಉಪದೇಶಿಸಿದ? | ಅನುಗೀತೆ. | (31) |
| 117. | ಸ್ಯಮಂತಕ ಮಣಿಯ ವಿಷಯದಲ್ಲಿ ಬಲರಾಮನು ಕೃಷ್ಣನ ವಿರೋಧ ಮಾಡಿ ದೂರವಾದಾಗ ಆ ಅವಕಾಶವನ್ನು ಯಾರು ದುರುಪಯೋಗಿಸಿ ಏನು ಮಾಡಿದ? | ದುರ್ಯೋಧನ. ಬಲರಾಮನ ಶಿಷ್ಯನಾದ. | (31) |
| 118. | ಕೃಷ್ಣನು ದುರ್ಯೋಧನನ ಯಾವ ಗುರುಗಳಿಗೆ ತನ್ನ ವಿಶ್ವರೂಪವನ್ನು ತೋರಿಸಿ ಅವನ ಅಭೀಷ್ಟವನ್ನು ಪೂರೈಸಿದ? | ಉದಂಕ ಮುನಿ. | (32) |
| 119. | ಅಶ್ವತ್ಥಾಮನ ಬ್ರಹ್ಮಶಿರೋಸ್ತ್ರದಿಂದ ಉತ್ತರೆಯ ಗರ್ಭದಲ್ಲಿ ಬಂದ ಯಾವ ಸತ್ತ ಮಗುವನ್ನು ಕೃಷ್ಣ ಅವಳ ಪ್ರಾರ್ಥನೆಗೆ ಮತ್ತೆ ಬದುಕಿಸಿದ? | ಪರೀಕ್ಷಿತ. | (32) |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ |
|---|---|---|---|
| 120. | ಕೃಷ್ಣನ ಅವತಾರ ಸಮಾಪ್ತಿಯಾಗಲು ಯಾರು ಅವನನ್ನು ಅರ್ಚಿಸಿ ಬೇಡಿಕೊಂಡರು? ಅವತಾರ ಸಮಾಪ್ತಿಯ ಮುಂಚೆ ಯಾರಿಗೆ ಉಪದೇಶಿಸಿದ? | ಬ್ರಹ್ಮಾದಿದೇವತೆಗಳು. ಉದ್ಧವ. | (33) |
| 121. | ಕೃಷ್ಣನ ಅವತಾರ ಸಮಾಪ್ತಿಯಾಗಲು ಯಾದವರನ್ನೆಲ್ಲಾ ಕರೆದೊಯ್ಯಲು ಮಾಡಿದ ಉಪಾಯವೇನು? | ಋಷಿಗಳಿಂದ ಶಪಿಸಿದನು. | (33) |
| 122. | 'ಕೃಷ್ಣಃ ನಿಜಚಿತ್ತಪದ್ಮೇ ದೇದೀಪ್ಯತೇ' ಅಂದರೇನು? | ಭಗವಂತ ತನ್ನ ಭಕ್ತರ ಹೃದಯಕಮಲದಲ್ಲಿ ನಿರಂತರ ಕಂಗೊಳಿಸುತ್ತಿರುತ್ತಾನೆ. | (33) |
| 123. | ಶ್ರೀಮನ್ನಾರಾಯಣನ ಪಾದಕಮಲದಲ್ಲಿ ನಾರಾಯಣಪಂಡಿತಾಚಾರ್ಯರು ಏನನ್ನು ಸಮರ್ಪಿಸುತ್ತಾರೆ? | ಶಾಸ್ತ್ರದ ಸಮುದ್ರದಿಂದ ಹೆಕ್ಕಿ ತೆಗೆದು ಪೋಣಿಸಿದ ಕೃಷ್ಣನ ದಿವ್ಯ ಲೀಲೆಯ ಕೃಷ್ಣಮಾಲೆಯನ್ನು ಸಮರ್ಪಿಸುತ್ತಾರೆ. | (34) |
| 124. | ವಸುದೇವ, ದೇವಕಿ, ರೋಹಿಣಿಯರ ಮೂಲರೂಪ ಯಾವುದು? | ಕಶ್ಯಪ ಋಷಿ, ಅದಿತಿ, ಸುರಭಿ. | |
| 125. | ಪ್ರದ್ಯುಮ್ನ–ಮಾಯಾವತಿ, ಜಾಂಬವಂತ, ಸಾಂಬರ ಮೂಲರೂಪ ಯಾವುವು? | ಮನ್ಮಥ–ರತಿ, ಯಮ, ಸ್ಕಂದ. | |
| 126. | ಕೃಷ್ಣಲೀಲೆಯಲ್ಲಿ ಪಾರ್ವತಿಯಿಂದ ವರಪಡೆದ 4 ದೈತ್ಯರ ಹೆಸರೇನು? | ತೃಣಾವರ್ತ, ಶಕಟಾಸುರ, ಪೂತನ, ಕೇಶಿ (ದುನಿ ಮತ್ತು ಚಮು). | |
| 127. | ಕೃಷ್ಣಲೀಲೆಯಲ್ಲಿ ರುದ್ರರಿಂದ ವರಪಡೆದ 4 ದೈತ್ಯರಾರು? | ವತ್ಸಾಸುರ, ಅರಿಷ್ಟಾಸುರ, ಚಾಣೂರ, ಮುಷ್ಟಿಕ. (ಶಂಖಚೂಡ, ಹಂಸ, ಡಿಭಿಕ) | |
| 128. | ಕೃಷ್ಣಲೀಲೆಯಲ್ಲಿ ಸ್ಕಂದನಿಂದ ವರಪಡೆದ 2 ದೈತ್ಯರಾರು? | ಬಕಾಸುರ, ಪ್ರಲಂಬಾಸುರ. | |
| 129. | ಕೃಷ್ಣಲೀಲೆಯಲ್ಲಿ ಬ್ರಹ್ಮನಿಂದ ವರಪಡೆದ 4 ದೈತ್ಯರಾರು? | ಉಗ್ರಾಸುರ, ವ್ಯೋಮಾಸುರ, ವಿಚಕ್ರ, ಮುರಾಸುರ. | |
| 130. | ಕೃಷ್ಣಲೀಲೆಯಲ್ಲಿ ಗಣಪತಿಯಿಂದ ವರಪಡೆದವರಾರು? | ಧೇನುಕಾಸುರ. | |

# ಲಿಕುಚಕುಲಪಂಡಿತಾಚಾರ್ಯ ಪರೀಕ್ಷೆ -2024-2025

## ಶಿವಸ್ತುತಿ

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ |
|---|---|---|---|
| 1. | ರುದ್ರದೇವರ ಐದು ರೂಪಗಳು | ಮಹೇಶ ತತ್ಪುರುಷ ಅಘೋರ ವಾಮದೇವ ಸದ್ಯೋಜಾತ | 03 |
| 2. | ರುದ್ರದೇವರ 8 ಮೂರ್ತಿಗಳು | ಭೂಮಿ ನೀರು ಬೆಂಕಿ ಗಾಳಿ ಆಕಾಶ ಸೂರ್ಯ ಚಂದ್ರ ಯಾಜಕ | 04 |
| 3. | ಸಹಸ್ರನಯನ ಯಾರು? | ಇಂದ್ರ | 08 |
| 4. | ರುದ್ರದೇವರಿಗೆ ಪ್ರಿಯತಮಕ್ಕಿಂತಲೂ ಪ್ರಿಯತಮ ಯಾರು? | ಲಕ್ಷ್ಮೀ ವಲ್ಲಭನಾದ ನಾರಾಯಣ | 09 |
| 5. | ಶೈವರು ವೈಷ್ಣವರೆಂದು ಯುದ್ಧ ಮಾಡುವವರು ಯಾರು ? | ವಿಷ್ಣು ಮತ್ತು ಶಿವನ ಸಂಬಂಧವನ್ನು ಸರಿಯಾಗಿ ತಿಳಿಯದೆ ಇರುವವರು | 09 |
| 6. | ನಿನ್ನನ್ನು ಶಿವ ಶಿವ ಎಂದು ಕೊಂಡಾಡುವುದರ ಫಲ | ಎಲ್ಲಾ ಪಾಪಗಳು ಸುಡುವುದು | 10 |

## ನರಸಿಂಹಸ್ತುತಿ

| | | | |
|---|---|---|---|
| 1. | 'ದಹ ದಹ ನರಸಿಂಹಾಸಹ್ಯ ವೀರ್ಯಾಹಿತಂ ಮೇ' ಇದರ ಅರ್ಥವೇನು | ತಡೆಯಲಸಾಧ್ಯವಾದ ಸಾಮರ್ಥ್ಯವುಳ್ಳ ನರಸಿಂಹನೆ! ನನ್ನ ಅನಿಷ್ಟವನ್ನೆಲ್ಲ ಸುಟ್ಟುಬಿಡು | 01 |
| 2. | ನರಸಿಂಹ ದೇವರ ಕಾಲು ಕೆಂಪಾಗಿರಲು ಕಾರಣವೇನು | ಕೊಲ್ಲಲ್ಪಟ್ಟ ಹಿರಣ್ಯಕಶಿಪುವಿನ ರಕ್ತದಿಂದ | 02 |
| 3. | ನರಸಿಂಹ ದೇವರ ಮುಂದೆ ಈ ಮೂರು ಲೋಕಗಳು ಯಾವುದಕ್ಕೆ ಸಮಾನ | ಸಣ್ಣ ಹುಲ್ಲು ಕಡ್ಡಿಗೆ ಸಮಾನ | 12 |
| 4. | ಸೂರ್ಯ ಚಂದ್ರರನ್ನು ಬೆಳಗುತ್ತಿರುವುದು ಹೇಗೆ | ನರಸಿಂಹ ದೇವರ ಕಣ್ಣಿನ ಬೆಳಕನ್ನು ಪಡೆದು | 12 |
| 5. | ನರಸಿಂಹ ಸ್ತುತಿಯಲ್ಲಿ ಎಷ್ಟು ಕೈಗಳುಳ್ಳ ನರಸಿಂಹನನ್ನು ಸ್ತುತಿಸಲಾಗಿದೆ | 16 | 16 |
| 6. | ಈ ನರಸಿಂಹ ಸ್ತುತಿಯನ್ನು ಪಠಿಸುವುದರ ಫಲ | ಶತ್ರುನಾಶ, ಪಾಪ ಪರಿಹಾರ, ಕಾಮಲೋಭಾದಿ ದೋಷಗಳಿಂದ ದೂರ | 21 |

ಏಡ್ಝುಟಿಚಿಚಿಡಿಠಿಚಿಟಿಚಿಟಭೆಣಣ

# ಸಂಗ್ರಹ ರಾಮಾಯಣ

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 1. | ಸಂಗ್ರಹರಾಮಾಯಣವನ್ನು ರಚಿಸಿದವರಾರು ? | ನಾರಾಯಣಪಂಡಿತಾಚಾರ್ಯರು | | 1 |
| 2. | ಸಂಗ್ರಹರಾಮಾಯಣದ ಮಂಗಲಾಚರಣೆಯಲ್ಲಿ ಯಾರನ್ನು ಸ್ತುತಿಸಲಾಗಿದೆ ? | ನಾರಾಯಣ–ರಾಮ, ಹನುಮ–ಭೀಮ–ಮಧ್ವ, ಗುರು, ವಾಲ್ಮೀಕಿ. | | 1 |
| 3. | ದೇವರ ವ್ಯಾಪ್ತಿ ಎಷ್ಟು ವಿಧ ? ಯಾವುದವು ? | 3 ವಿಧ = ದೇಶತಃ, ಕಾಲತಃ, ಗುಣತಃ. | 1 | 1 |
| 4. | ಜಲಧಿ ದುಹಿತುಹು ಅಂದರೆ ಯಾರು ? | ಸಮುದ್ರ ರಾಜನ ಮಗಳು = ಲಕ್ಷ್ಮೀದೇವಿ | 2 | 1 |
| 5. | ದ್ಯೂತಾವದ್ಯಮ್ ಅಂದರೆ ಏನು? ಯಾರಿಗೆ ವಿಶೇಷಣ? | ದೋಷಗಳನ್ನು ದೂರೀಕರಿಸಿದವನು. ನಾರಾಯಣ | 1 | 1 |
| 6. | ಮಧ್ವರೆಂಬ ಕ್ಷೀರ ಸಮುದ್ರದಲ್ಲಿರುವ ತರಂಗಗಳು ಯಾವುದು ? | ವಾಕ್ ತರಂಗಗಳು | 5 | 1 |
| 7. | ಮಧ್ವ ದುಗ್ಧಾಬ್ಧಿಯಲ್ಲಿರುವ ನೀರು ಯಾವುದು ? | ಪೂರ್ಣ ಜ್ಞಾನವೇ ನೀರು | 5 | 1 |
| 8. | ಜಗತ್ತಿನ ಸೃಷ್ಟಿಗೂ ಮೊದಲು ಇದ್ದವರಾರು? | ಸ್ವರಮಣನಾದ ನಾರಾಯಣ ಮತ್ತು ರಮಾದೇವೀ. | 8 | 1 |
| 9. | ಪ್ರಲಯಕಾಲದಲ್ಲಿ ಸಮಗ್ರಜಗತ್ತನ್ನು ತನ್ನ ಹೊಟ್ಟೆಯಲ್ಲಿರಿಸಿಕೊಂಡು ನಿದ್ರಾಭಂಗಿಯಲ್ಲಿದ್ದ ಹರಿಯನ್ನು ಸ್ತುತಿಸುತ್ತಿದ್ದವರಾರು ? | ವೇದಗಳು | 9 | 1 |
| 10. | ಕೃತಕೃತ್ಯನಾದ ಭಗವಂತ ಎತಕ್ಕಾಗಿ ಈ ಜಗತ್ತನ್ನು ಸೃಷ್ಟಿಸಿದ ? | ತನ್ನ ಭಕ್ತರ ಏಳಿಗೆಗಾಗಿ | 10 | 1 |
| 11. | ಮೋಕ್ಷವನ್ನು ಕೊಡುವ ಭಗವಂತನ ರೂಪ ? | ಮಾಯಾ–ವಾಸುದೇವ | 11 | 1 |
| 12. | ಪ್ರಳಯಕಾಲದಲ್ಲಿ ಸಮಗ್ರಜಗತ್ತನ್ನು ನಾಶಮಾಡುವ ಭಗವಂತನ ರೂಪ ? | ಜಯಾ–ಸಂಕರ್ಷಣ | 12 | 1 |
| 13. | ಜಗತ್ತನ್ನು ಸೃಷ್ಟಿಮಾಡುವ ಭಗವದ್ರೂಪ ? | ಕೃತಿ–ಪ್ರದ್ಯುಮ್ನ | 13 | 1 |
| 14. | ಸೃಷ್ಟವಾದ ಜಗತ್ತಿಗೆ ಸ್ಥಿತಿಯನ್ನು ನೀಡಿ ಸಂರಕ್ಷಿಸುವ ರೂಪ ? | ಶಾಂತಿ–ಅನಿರುದ್ಧ | 14 | 1 |
| 15. | ಸೃಷ್ಟಿಯ ಆದಿಯಲ್ಲಿ 5 ರೂಪಗಳನ್ನು ಪಡೆದ ಭಗವಂತ ನಂತರ ಎಷ್ಟು ರೂಪಗಳನ್ನು ಪಡೆದ ? | ದಶ–ದ್ವಾದಶ–ಶತ–ಸಹಸ್ರ– ಅನಂತ 10–12–100–1000–∞ | 15 | 1 |
| 16. | ಯಾವುದು ಶ್ರೀಹರಿಗೆ ದೇಹವಾಗುತ್ತದೆ ? | ಅಗಣ್ಯ ಗುಣಗಳು | 16 | 1 |
| 17. | ಭಗವಂತನಲ್ಲಿ ಕಿಂಚಿತ್ತೂ ದೋಷವಿಲ್ಲ ಎಂಬುದಕ್ಕೆ ಸಾಕ್ಷಿ | ವೇದ–ವೇದಾಂತ–ಪುರಾಣ–ಇತಿಹಾಸ–ಪಂಚರಾತ್ರ–ಬ್ರಹ್ಮತರ್ಕ. (ಯುಕ್ತಿಗಳು) | 18 | 1 |
| 18. | ಸೃಷ್ಟಿಗಾಗಿ ಭಗವಂತನು ಯಾವುದರಲ್ಲಿ ವೈಷಮ್ಯವನ್ನು ಉಂಟು ಮಾಡಿದ? | ಗುಣತ್ರಯಗಳಲ್ಲಿ (ಸತ್ವಗುಣ, ರಜೋಗುಣ, ತಮೋಗುಣ) | 19 | 1 |
| 19. | ಭಗವಂತನು ಸೃಷ್ಟಿಸಿದ ಮೊದಲ ತತ್ವ ಯಾವುದು ? | ಮಹತ್ತತ್ವ | 19 | 1 |
| 20. | ಮೊದಲು ಭಗವಂತನಿಂದ ಸೃಷ್ಟವಾದವುಗಳು ? | ಮಹತ್ತತ್ವ (ಬ್ರಹ್ಮ)–ಅಹಂಕಾರತತ್ವ (ಶಿವ) – ಪಂಚಭೂತ–ಇಂದ್ರಿಯ–ದೇವತೆಗಳು | 19 | 1 |
| 21. | ಎಲ್ಲಾ ತತ್ವಗಳೂ – ತದಭಿಮಾನಿದೇವತೆಗಳೂ ಸೇರಿ ಜಗತ್ತನ್ನು ಸೃಷ್ಟಿಮಾಡಲು ಪ್ರಯತ್ನಿಸಿ, ಆಗದಿದ್ದಾಗ ಏನು ಮಾಡಿದರು ? | ಶ್ರೀಹರಿಯನ್ನು ಶರಣು ಹೊಂದಿದರು | 20 | 1 |
| 22. | ಯಾವುದರಿಂದ ಭಗವಂತನು ಈ ಬ್ರಹ್ಮಾಂಡವನ್ನು ಸೃಷ್ಟಿ ಮಾಡಿದನು ? | ತನ್ನಿಂದ ಆವಿಷ್ಟವಾದ ತತ್ವಗಳಿಂದ | 21 | 1 |
| 23. | ಸನಕಾದಿಗಳನ್ನು ಸೃಷ್ಟಿ ಮಾಡಿದ ಬ್ರಹ್ಮದೇವರಿಗೆ ಕೋಪ ಬರಲು ಕಾರಣ ? | ಸನಕಾದಿಗಳು ಸೃಷ್ಟಿಪ್ರಕ್ರಿಯೆಯಲ್ಲಿ ತೊಡಗದೇ ಇದ್ದದ್ದು | 23 | 1 |
| 24. | ಸನಕಾದಿಗಳು ಸೃಷ್ಟಿಪ್ರಕ್ರಿಯೆಯಲ್ಲಿ ತೊಡಗದೇ ಇರಲು ಕಾರಣ ? | ವೈರಾಗ್ಯ | 23 | 1 |
| 25. | ಕೋಪಗೊಂಡ ಬ್ರಹ್ಮದೇವರು ಧ್ಯಾನಾಸಕ್ತರಾದಾಗ ಏನಾಯತು ? | ಬ್ರಹ್ಮದೇವರ ಲಲಾಟದಿಂದ ರುದ್ರದೇವರು ಹುಟ್ಟಿದರು. | 24 | 1 |
| 26. | ಬ್ರಹ್ಮದೇವರ ಪ್ರಾಣಗಳಿಂದ ಹುಟ್ಟಿ ಈ ಜಗದ್ವೃಕ್ಷಕ್ಕೆ ಬೀಜದಂತಿರುವ ಕಶ್ಯಪರ ತಂದೆ ಯಾರು | ಮರೀಚಿ ಮಹರ್ಷಿಗಳು | 25 | 1 |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 27. | ಸೂರ್ಯವಂಶಕ್ಕೆ ಮೂಲಪುರುಷನಾದ(ವಿವಸ್ವಾನ್) ಸೂರ್ಯನ ತಂದೆ–ತಾಯಿ ಯಾರು? | ಕಶ್ಯಪ–ಅದಿತಿ | 26 | 1 |
| 28. | ಸೂರ್ಯನ ಮಗನಾದ ಮನುವಿನ ಹೆಸರೇನು ? | ಶ್ರಾದ್ಧದೇವ (ವೈವಸ್ವತ ಮನು) | 27 | 1 |
| 29. | ದಶರಥನ ಕಾಲದಲ್ಲಿದ್ದ ಪುರುಷಾರ್ಥಗಳನ್ನು ಯಾವುದಕ್ಕೆ ಹೋಲಿಸಿದ್ದಾರೆ | ವೃಷಭ–ಧರ್ಮ,<br>ಎರಡು ಕೋಡುಗಳು–ಅರ್ಥ,ಕಾಮ,<br>ನೊಗ(ನೇಗಿಲು)–ಮೋಕ್ಷ | 30 | 1 |
| 30. | ಧರ್ಮದ ನಾಲ್ಕು ಪಾದಗಳು ಯಾವುವು ? | ತಪಃ–ಶೌಚಂ–ದಯಾ–ಸತ್ಯಮ್ | 30 | 1 |
| 31. | ರಾಮಾಯಣದಲ್ಲಿ, ಇವನ ಮುಂದೆ ಬೇಡಿ ಬಂದವರು ಬರಿಗೈಯಲ್ಲಿ ಹೋಗುತ್ತಿರಲಿಲ್ಲ, ಯುದ್ಧ ಮಾಡಲು ಬಂದವರು ತಲೆ ಎತ್ತಲಾಗುತ್ತಿರಲಿಲ್ಲ. ಇಂತಹ ಉದಾರಿ–ಶೂರ ಯಾರು ? | ದಶರಥ ಮಹಾರಾಜ | 31 | 1 |
| 32. | ದಶರಥ ಮಕ್ಕಳನ್ನು ಪಡೆಯಲು ಮಾಡಿದ ಯಾಗ ಯಾವುದು ? | ಅಶ್ವಮೇಧ | 35 | 1 |
| 33. | ಅಶ್ವಮೇಧ ಯಾಗಕ್ಕಾಗಿ ಋತ್ವಿಜರನ್ನು ಕರೆತರಲು ನಿಯೋಜನೆಗೊಂಡವ ಯಾರು ? | ಸುಮಂತ್ರ (ದಶರಥನ ಮಂತ್ರಿ) | 36 | 1 |
| 34. | ಯಾಗಕ್ಕಾಗಿ ಕರೆತಂದ ಬ್ರಹ್ಮಜ್ಞಾನಿಗಳನ್ನು ಕಂಡ ದಶರಥ ಏನು ಮಾಡಿದ ? | ತಾನು ಚಕ್ರವರ್ತಿ ಎನ್ನುವ ಅಭಿಮಾನವನ್ನೂ ಬಿಟ್ಟು ಭಕ್ತಿಯಿಂದ ನಮಸ್ಕರಿಸಿದ | 37 | 1 |
| 35. | ದಶರಥನ ಯಾಗಕ್ಕೆ ಬಂದ ಐವರು ಜ್ಞಾನಿಗಳು ಯಾರು ? | ಸುಯಜ್ಞ, ವಾಮದೇವ, ಜಾಬಾಲಿ, ಕಶ್ಯಪ, ವಸಿಷ್ಠ | 1 | 2 |
| 36. | ದಶರಥನಿಗೂ ಮೊದಲು ಋಷ್ಯಶೃಂಗನ ಕಥೆಯನ್ನು ಋಷಿಗಳ ಸಭೆಯಲ್ಲಿ ಹೇಳಿದವರಾರು ? | ಸನತ್ಕುಮಾರ | 4 | 2 |
| 37. | ವಿಭಾಂಡಕರು ಯಾರು ? | ಕಶ್ಯಪರ ಮಗ, ಋಷ್ಯಶೃಂಗರ ತಂದೆ | 5 | 2 |
| 38. | ಶುದ್ಧಬ್ರಹ್ಮಚಾರಿಗಳಾದ ಋಷ್ಯಶೃಂಗರನ್ನು ಯಾರು ತಮ್ಮ ದೇಶಕ್ಕೆ ಕರೆತಂದರು ? | ಅಂಗದೇಶದ ರಾಜ | 6 | 2 |
| 39. | ಮಳೆ ಬಾರದ ತನ್ನ ದೇಶಕ್ಕೆ ಋಷ್ಯಶೃಂಗರು ಬಂದರೆ ಮಳೆಬರುವುದೆಂದು ತೀರ್ಮಾನಿಸಿದ ಅಂಗದೇಶದ ರಾಜ ಯಾರು ? | ಲೋಮಪಾದ | 6–7 | 2 |
| 40. | ಋಷ್ಯಶೃಂಗರನ್ನು ಅಂಗದೇಶದವರು ಹೇಗೆ ಕರೆತಂದರು ? | ಸ್ತ್ರೀಯರ ಮುನಿವೇಷವ ಧರಿಸಿ – ವಂಚಿಸಿ | 7 | 2 |
| 41. | ಋಷ್ಯಶೃಂಗರು ಅಂಗದೇಶಕ್ಕೆ ಬಂದ ಕೂಡಲೇ ಏನಾಯಿತು? | ಮಳೆ ಸುರಿಯಿತು | 8 | 2 |
| 42. | ತನ್ನ ದೇಶದಲ್ಲಿ ಮಳೆ ಸುರಿಸಿದ ಋಷ್ಯಶೃಂಗರಿಗೆ ಲೋಮಪಾದ ಪ್ರತಿಯಾಗಿ ಏನನ್ನು ಕೊಟ್ಟ ? | ತನ್ನ ಮಗಳಾದ ಶಾಂತಾಳನ್ನು | 8 | 2 |
| 43. | ದಶರಥನ ಯಾಗದ ನೇತೃತ್ವ ವಹಿಸಿದವರಾರು ? | ಋಷ್ಯಶೃಂಗರು | 8 | 2 |
| 44. | ಋಷ್ಯಶೃಂಗರಿಂದ ಯಾಗವನ್ನು ಮಾಡಿಸಿದಾಗ ಶ್ರೀ ಹರಿಯೇ ರಾಮನಾಗಿ ಅವತರಿಸುತ್ತಾನೆ ಎಂದು ಮೊದಲೇ ಯಾರು ಹೇಳಿದ್ದರು ? | ಸನತ್ಕುಮಾರ | | 2 |
| 45. | ಸುಮಂತ್ರನ ಸಲಹೆಯಂತೆ ವಸಿಷ್ಠರ ಅಪ್ಪಣೆಯಂತೆ ದಶರಥನು ಯಾಗಕ್ಕಾಗಿ ಯಾರನ್ನು ಕರೆತಂದನು ? | ಋಷ್ಯಶೃಂಗಮುನಿಗಳನ್ನು | | 2 |
| 46. | ದಶರಥನು ಅಶ್ವಮೇಧ ಯಾಗವನ್ನು ಎಲ್ಲಿ ಮಾಡಿದನು? | ಸರಯೂ ನದಿಯ ಉತ್ತರ ತೀರದಲ್ಲಿ | 13 | 2 |
| 47. | ದಶರಥನ ಯಾಗದಲ್ಲಿ ನಿರಂತರವಾಗಿ ಕೇಳುತ್ತಿದ್ದ ಶಬ್ದಗಳು ಯಾವುವು? | ಕುಳಿತುಕೊಳ್ಳಿರಿ, ಕುಡಿಯಿರಿ, ತಿನ್ನಿರಿ, ಧರಿಸಿರಿ | 16 | 2 |
| 48. | ನಾವು ಮಾಡುವ ಕರ್ಮ ಪರಿಶುದ್ಧವಾಗುವುದು ಯಾವಾಗ? | ಮಂತ್ರ ತಂತ್ರ ಉಪಕರಣ, ಕರ್ತೃ, ಅಗ್ನಿ, ದೇಶ, ಕಾಲ ಹೀಗೆ ಎಲ್ಲದರಲ್ಲಿಯೂ ಭಗವಂತನನ್ನು ಚಿಂತಿಸಿದಾಗ | 18 | 2 |
| 49. | ದಶರಥನ ಅಶ್ವಮೇಧ ಯಾಗದ ಯಾಜಕರು ಯಾರು? | ವಸಿಷ್ಠರು | 20 | 2 |
| 50. | ದಶರಥನು ಅರ್ಬುದದಷ್ಟು ರುಗ್ಮವನ್ನು ದಾನ ಮಾಡಿದ. ಇಲ್ಲಿ ರುಗ್ಮ ಎಂದರೇನು? | ಚಿನ್ನ | 21 | 2 |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 51. | ಸುವರ್ಣಕ್ಕಿಂತ ನಾಲ್ಕು ಪಟ್ಟು ದುರ್ವರ್ಣವನ್ನು ದಾನ ಮಾಡಿದ. ಇಲ್ಲಿ ದುರ್ವರ್ಣ ಎಂದರೇನು? | ಬೆಳ್ಳಿ | 22 | 2 |
| 52. | ರಾಜ ದಶರಥನು ಯಾವ ಅನುಸಂದಾನದಿಂದ ಯಾಗದ ಅಂತ್ಯದಲ್ಲಿ ನಮಸ್ಕರಿಸಿದ ? | ವಿಷ್ಣು ಈ ಯಾಗದಿಂದ ಸಂತುಷ್ಟನಾಗಲಿ | 22 | 2 |
| 53. | ಯಾಗದ ಸಮಯದಲ್ಲಿ ಬೇಡಿದ ಕಡು ಬಡವನಿಗೆ ದಶರಥ ಏನನ್ನು ನೀಡಿದ? | ಕೈ ಕಡಗವನ್ನು | 24 | 2 |
| 54. | ಅಶ್ವಮೇಧದ ಅಗ್ನಿಯಿಂದ ತನ್ನ ಪಾಪವನ್ನು ಸುಟ್ಟುಕೊಂಡವನು ಯಾರು? | ಸಪತ್ನಿಕನಾದ ದಶರಥ | 25 | 2 |
| 55. | ಅಶ್ವಮೇಧ ಯಾಗದ ಪರಿಪೂರ್ಣತೆಯನ್ನು ಪಡೆಯಲು ಋಷ್ಯಶೃಂಗರು ಮಾಡಿದ ಯಾಗ ಯಾವುದು? | ಪುತ್ರಕಾಮೇಷ್ಟಿ ಯಾಗ | | 2 |
| 56. | ಋಷ್ಯಶೃಂಗ ಮುನಿಗಳು ಯಾವ ಮಂತ್ರಗಳಿಂದ ಯಾಗವನ್ನು ಮಾಡಿದರು ? | ಅಥರ್ವಶೀರ್ಷ ಮಂತ್ರಗಳಿಂದ | 26 | 2 |
| 57. | ಋಷ್ಯಶೃಂಗರ ಯಾಗದಲ್ಲಿ ಹವಿಸ್ಸನ್ನು ಸ್ವೀಕರಿಸಲು ಯಾರು ಬಂದರು ? | ಇಂದ್ರಾದಿ ದೇವತೆಗಳು | 27 | 2 |
| 58. | ಪುತ್ರಕಾಮೇಷ್ಟಿಯಾಗದಲ್ಲಿ ದಶರಥನ ಪುತ್ರಕಾಮನೆಯನ್ನು ದೇವತೆಗಳಲ್ಲಿ ಪ್ರಾರ್ಥಿಸಿದವರಾರು? | ಋಷ್ಯಶೃಂಗರು | | 2 |
| 59. | ದೇವತೆಗಳು ದಶರಥನಿಗೆ ಮಕ್ಕಳನ್ನು ಅನುಗ್ರಹಿಸಲು ನೀಡಿದ ಮತ್ತೊಂದು ಕಾರಣವೇನು? | ದೇವ ಕಾರ್ಯವು ಆಗಬೇಕಿರುವುದರಿಂದ | 29 | 2 |
| 60. | ದಶರಥನ ಪುತ್ರಕಾಮೇಷ್ಟಿಯಾಗದಲ್ಲಿ ಅವನನ್ನು ಅನುಗ್ರಹಿಸಿ ಹೊರಟ ದೇವತೆಗಳು ಎಲ್ಲಿಗೆ ಹೋದರು. | ಬ್ರಹ್ಮಲೋಕಕ್ಕೆ | 30 | 2 |
| 61. | ಯಾಗದ ನಂತರ ಬ್ರಹ್ಮ ಲೋಕಕ್ಕೆ ಹೋದ ದೇವತೆಗಳು ಬ್ರಹ್ಮದೇವರಲ್ಲಿ ಏನೆಂದು ಪ್ರಾರ್ಥಿಸಿಕೊಂಡರು? | ರಾಕ್ಷಸರಿಂದ ಪೀಡಿಸಲ್ಪಡುತ್ತಿರುವ ಜನರನ್ನು ರಕ್ಷಿಸಿ | 31 | 2 |
| 62. | ಬ್ರಹ್ಮದೇವರಿಂದ ಅವಧ್ಯತ್ವವರವನ್ನು ಪಡೆದ ರಾಕ್ಷಸರು ಯಾರು? | ರಾವಣ–ಕುಂಭಕರ್ಣ | 32 | 2 |
| 63. | ರಾವಣ ಕುಂಭಕರ್ಣರ ತಂದೆಯ ಹೆಸರೇನು? | ವಿಶ್ರವಸ್ | 32 | 2 |
| 64. | ಪ್ರಜೆಗಳನ್ನು ತನ್ನ ಇಪ್ಪತ್ತು ಕೈಗಳಿಂದ ಹಿಂಸಿಸುತ್ತಿದ್ದವ ಯಾರು? | ರಾವಣ | 33 | 2 |
| 65. | ಭೂಲೋಕದಲ್ಲಿ ಕಾಣುವ ಎಲ್ಲಾ ಶ್ರೇಷ್ಠವಾದ ಸಂಪತ್ತನ್ನು ರಾವಣ ಎಲ್ಲಿಗೆ ಕೊಂಡೊಯ್ಯುತ್ತಿದ್ದ ? | ಲಂಕಾ ನಗರಕ್ಕೆ | 36 | 2 |
| 66. | ದೇವತೆಗಳಿಗೆ ಋಷಿಗಳಿಗೆ ಈ ರಾವಣ ಯಾವ ವಿಷಯದಲ್ಲಿ ತೊಂದರೆ ಕೊಡುತ್ತಿದ್ದ ? | ತಪಸ್ಸು ಅಧ್ಯಯನ ಯಜ್ಞ ಯಾಗಾದಿಗಳಲ್ಲಿ | 38 | 2 |
| 67. | ಆನೆಯು ಮೇಕೆಗಳನ್ನು ಓಡಿಸಿದಂತೆ ರಾವಣನು ಯಾರನ್ನು ಹೆದರಿಸಿ ಓಡಿಸುತ್ತಿದ್ದ? | ಇಂದ್ರಾದಿ ದೇವತೆಗಳನ್ನು | 39 | 2 |
| 68. | ರಾವಣಾದಿಗಳ ಉಪಟಳವನ್ನು ದೇವತೆಗಳು ಬ್ರಹ್ಮ ದೇವರ ಮುಂದೆ ಹೇಳಿಕೊಂಡಾಗ ಚತುರ್ಮುಖ ಬ್ರಹ್ಮ ದೇವರು ಏನು ಹೇಳಿದರು ? | ಯೋಗಕ್ಷೇಮಪ್ರದನಾದ ಶ್ರೀಹರಿಯು ನೋಡಿಕೊಳ್ಳುತ್ತಾನೆ | 41 | 2 |
| 69. | ರುದ್ರಾದಿ ದೇವತೆಗಳೊಂದಿಗೆ ಬ್ರಹ್ಮದೇವರು ಶ್ರೀಹರಿಯನ್ನು ಪ್ರಾರ್ಥಿಸಲು ಎಲ್ಲಿಗೆ ಬಂದರು? | ಕ್ಷೀರಸಾಗರಕ್ಕೆ | 43 | 2 |
| 70. | ಸಮಗ್ರ ಲೋಕಕ್ಕೆ ಸೃಷ್ಟಿ–ಸ್ಥಿತಿ–ಸಂಹಾರ–ನಿಯಮನ–ಜ್ಞಾನ–ಅಜ್ಞಾನ–ಬಂಧ–ಮೋಕ್ಷ ಇವೆಲ್ಲವನ್ನೂ ನೀಡುವವನು ಯಾರು ? | ಶ್ರೀಹರಿ | 49 | 2 |
| 71. | ದಶರಥನ ಯಾಗದಲ್ಲಿ ಪ್ರಜ್ವಲಿಸುವ ಅಗ್ನಿಯಿಂದ ಯಾರು ಎದ್ದು ಬಂದರು? | ನಾರಾಯಣನ ಆದೇಶದಂತೆ ಬ್ರಹ್ಮಲೋಕದ ತೇಜಸ್ವಿಯೊಬ್ಬ | 4 | 3 |
| 72. | ಅಗ್ನಿಯಿಂದ ಬಂದ ಆ ತೇಜಸ್ವಿಯು ಏನನ್ನು ನೀಡಿದನು? | ಚಿನ್ನದ ಪಾತ್ರೆಯಲ್ಲಿ ತುಂಬಿದ ಪಾಯಸವನ್ನು | 5 | 3 |
| 73. | ದಶರಥನು ಆ ಪಾಯಸವನ್ನು ಹಂಚುವಾಗ ಕೌಸಲ್ಯೆಗೆ, ಸುಮಿತ್ರೆಗೆ ಮತ್ತು ಕೈಕೇಯಿಗೆ ಎಷ್ಟು ಪಾಯಸವನ್ನು ನೀಡಿದ ? | ಕೌಸಲ್ಯೆಗೆ ಅರ್ಧಭಾಗವನ್ನು (1/2)<br>ಸುಮಿತ್ರೆಗೆ (1/4)+ (1/8) ಭಾಗವನ್ನು<br>ಕೈಕೇಯಿಗೆ (1/8) ಭಾಗವನ್ನು ನೀಡಿದ. | 6–7 | 3 |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 74. | ಭಗವಂತನು ರಾಮಚಂದ್ರನಾಗಿ ಅವತರಿಸುವ ಕಾಲದಲ್ಲಿ ಬ್ರಹ್ಮ ದೇವರು ನೀಡಿದ ಆದೇಶವೇನು? | ಆ ರಾಮದೇವರ ಸೇವೆ ಮಾಡಲು ನೀವೆಲ್ಲರೂ ಅವತರಿಸಿ ಎಂದು | 12 | 3 |
| 75. | ರಾಮನ ಅವತಾರದ ಕಾಲದಲ್ಲಿ ದೇವತೆಗಳು ಯಾವ ಯಾವ ರೂಪದಲ್ಲಿ ಅವತರಿಸಿದರು? | ವಾನರ, ಗೋಲಾಂಗುಲ(ಕಪ್ಪು ಮುಖದ ಕಪಿಗಳು), ಕರಡಿ, ಮನುಷ್ಯರಾಗಿ | 15 | 3 |
| 76. | ಹನುಮಂತನ ತಂದೆಯಾದ ಕೇಸರಿ, ವಾಲಿ, ಸುಗ್ರೀವ ಯಾವ ದೇವತೆಗಳ ಅವತಾರರು ? | ಕ್ರಮವಾಗಿ ಮರುದೇವತೆಯ ಇಂದ್ರ ಮತ್ತು ಸೂರ್ಯ | 22 | 3 |
| 77. | ರಾಮಾಯಣದಲ್ಲಿ ಚಂದ್ರ, ಅಗ್ನಿ, ವರುಣ, ವಿಶ್ವಕರ್ಮ, ಅಶ್ವಿನಿ ದೇವತೆಗಳು, ಬೃಹಸ್ಪತಿ ಆಚಾರ್ಯರು, ಶಚೀದೇವಿಯರು ಯರಾಗಿ ಅವತರಿಸಿದರು ? | ವಾಲಿಯ ಮಗನಾದ ಅಂಗದ, ನೀಲಾ, ಸುಷೇಣ, ನಳ, ಮೈಂದ–ವಿವಿಧ, ತಾರ, ತಾರನ ತಂಗಿಯಾದ ತಾರೆ | 17–21 | 3 |
| 78. | ಶ್ರೀರಾಮಚಂದ್ರನು ಅವತರಿಸಿದ ದಿನ ? | ಚೈತ್ರ ಮಾಸ ಶುಕ್ರಪಕ್ಷ ಪುನರ್ವಸು ನಕ್ಷತ್ರದ ಹಗಲು | 27 | 3 |
| 79. | ಶ್ರೀರಾಮಚಂದ್ರನು ಅವತರಿಸುವ ಕಾಲದಲ್ಲಿ ಉಚ್ಚ ಸ್ಥಾನದಲ್ಲಿದ್ದ 5 ಗ್ರಹಗಳು ? | ಕುಜ ಬುಧ ಗುರು ಶುಕ್ರ ಶನಿ | 28 | 3 |
| 80. | ಲಕ್ಷ್ಮಣನು ಯಾರ ಅವತಾರ? | ನಾರಾಯಣನ ಹಾಸಿಗೆಯಾದ ಶೇಷನ ಅವತಾರ | 32 | 3 |
| 81. | ಲಕ್ಷ್ಮಣನು ಸುಮಿತ್ರೆಯ ಮಗನಾಗಿ ಅವತರಿಸಿದ ಕಾಲ | ಕರ್ಕಾಟಕ ಮಾಸದ ಆಶ್ಲೇಷ ನಕ್ಷತ್ರ | | 3 |
| 82. | ಭರತನು ಯಾರ ಅವತಾರ | ನಾರಾಯಣನ ಸುದರ್ಶನ ಚಕ್ರಕ್ಕೆ ಅಭಿಮಾನಿಯಾದ ಕಾಮನ ಅವತಾರ | 33 | 3 |
| 83. | ಭರತನು ಕೈಕೆಯಿಯ ಮಗನಾಗಿ ಅವತರಿಸಿದ ಕಾಲ ? | ಪುಷ್ಯ ನಕ್ಷತ್ರ | 33 | 3 |
| 84. | ಶತ್ರುಘ್ನ ಯಾರ ಅವತಾರ ? | ನಾರಾಯಣನ ಪಾಂಚಜನ್ಯ ಶಂಖದ ಅಭಿಮಾನಿಯಾದ ಅನಿರುದ್ಧನ ಅವತಾರ | 34 | 3 |
| 85. | ಲಕ್ಷ್ಮಣ, ಭರತ, ಶತ್ರುಘ್ನರಲ್ಲಿ ಭಗವಂತನ ಯಾವ ಯಾವ ರೂಪದ ಆವೇಶವಿತ್ತು ? | ಸಂಕರ್ಷಣ–ಪ್ರದ್ಯುಮ್ನ–ಅನಿರುದ್ಧ | 36 | 3 |
| 86. | ರಾಮ ಶಬ್ದದ ಅರ್ಥವೇನು? | ಎಲ್ಲರಿಗೂ ಸಂತೋಷವನ್ನು ನೀಡುವವನು, ಯಾವಾಗಲೂ ರಮಾದೇವಿಯೊಟ್ಟಿಗೆ ಇರುವವನು. | 44–45 | 3 |
| 87. | ಲಕ್ಷ್ಮಣ ಶಬ್ದದ ಅರ್ಥವೇನು? | ಸಾತ್ವಿಕರ (ಸಜ್ಜನರ) ಎಲ್ಲಾ ಲಕ್ಷಣಗಳಿಂದ(**ಚಿಹ್ನೆ**) ಕೂಡಿದವನು | 46 | 3 |
| 88. | ಭರತ ಶಬ್ದದ ಅರ್ಥವೇನು? | ಎಲ್ಲಾ ಗುಣಗಳಿಂದ ತುಂಬಿದವನು | 47 | 3 |
| 89. | ಗುರುಗಳ ಮುಂದೆ ಸೇವಕನಂತೆ ವರ್ತಿಸುತ್ತಿದ್ದ ರಾಮ ಲಕ್ಷ್ಮಣರು ಲೋಕದ ಜನರಿಗೆ ಹೇಗೆ ಕಾಣುತ್ತಿದ್ದರು ? | ದೇವತೆಗಳಂತೆ | 51 | 3 |
| 90. | ಲಕ್ಷ್ಮಣ ಶತ್ರುಘ್ನರು ನಿರಂತರವಾಗಿ ಯಾರನ್ನು ಹಿಂಬಾಲಿಸುತ್ತಿದ್ದರು? | ಲಕ್ಷ್ಮಣನು ಶ್ರೀರಾಮನನ್ನು, ಶತ್ರುಘ್ನ ಭರತನನ್ನು ಅನುಸರಿಸುತ್ತಿದ್ದನು. | 52 | 3 |
| 91. | ಶ್ರೀರಾಮನ ವಿವಾಹದ ವಿಚಾರದಲ್ಲಿ ಮಂತ್ರಿಗಳೊಟ್ಟಿಗೆ ಸಮಲೋಚಿಸುತ್ತಿದ್ದ ಸಭೆಗೆ ಯಾರು ಬಂದರು ? | ವಿಶ್ವಾಮಿತ್ರರು | 2 | 4 |
| 92. | ಸಭೆಗೆ ಬಂದ ವಿಶ್ವಾಮಿತ್ರರನ್ನು ಯಾರು ಸ್ವಾಗತಿಸಿ ಆಸನವನ್ನು ನೀಡಿದರು ? | ವಸಿಷ್ಠರು ಮತ್ತು ದಶರಥ | 3 | 4 |
| 93. | ದಶರಥನಲ್ಲಿಗೆ ವಿಶ್ವಾಮಿತ್ರರು ಏತಕ್ಕಾಗಿ ಬಂದಿದ್ದರು ? | ತಮ್ಮ ಯಾಗವನ್ನು ಹಾಳು ಮಾಡುತ್ತಿದ್ದ ರಾಕ್ಷಸರಿಂದ ರಕ್ಷಣೆಯನ್ನು ಪಡೆಯಲು | 7 | 4 |
| 94. | ವಿಶ್ವಾಮಿತ್ರರ ಯಾಗವನ್ನು ಹಾಳು ಮಾಡುತ್ತಿದ್ದ ರಾಕ್ಷಸರಿಗೆ ಯಾರ ವರಬಲವಿತ್ತು ? | ರುದ್ರದೇವರ ಅವಧ್ಯತ್ವ ವರ ಬಲವಿತ್ತು<br>* ಅವಧ್ಯತ್ವ = ಮರಣ ರಹಿತ | 8 | 4 |
| 95. | ವಿಶ್ವಾಮಿತ್ರರು ಶ್ರೀ ರಾಮನನ್ನು ಕೇಳಿದಾಗ ದಶರಥನ ಪರಿಸ್ಥಿತಿ ಏನಾಯ್ತು ? | ಮೂರ್ಚಿತನಾದ | 11 | 4 |
| 96. | ರಾಮನು ಹುಟ್ಟುವುದಕ್ಕೂ ಮುಂಚೆ ದಶರಥನು ಎಷ್ಟು ವರ್ಷಗಳ ಕಾಲ ಪುತ್ರ ವಿರಹ ವೇದನೆಯನ್ನು ಅನುಭವಿಸಿದ್ದ? | 9000 ವರ್ಷಗಳ ಕಾಲ | 14 | 4 |
| 97. | ರಾಮನನ್ನು ವಿಶ್ವಾಮಿತ್ರರ ಬಳಿ ಕಳುಹಿಸಲು ಒಪ್ಪದ ದಶರಥ ಏನು ಹೇಳಿದ ? | ಯುದ್ಧಕ್ಕಾಗಿ ತನ್ನನ್ನು ಕರೆದುಕೊಂಡು ಹೋಗಲು ಪ್ರಾರ್ಥಿಸಿದ | 16 | 4 |
| 98. | ದಶರಥ ಎಲ್ಲಿಯವರೆಗೂ ಶತ್ರುಗಳೊಟ್ಟಿಗೆ ಹೋರಾಡುವೆ ಎಂದನು? | ತನ್ನ ಉಸಿರಿರುವರೆಗೂ | 19 | 4 |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 99. | ಕ್ಷತ್ರಿಯರು ದೇಹವನ್ನು ಯಾರ ರಕ್ಷಣೆಗೆ ಉಪಯೋಗಿಸಬೇಕು ? | ಗೋ ಬ್ರಾಹ್ಮಣರ ರಕ್ಷಣೆಗಾಗಿ | 19 | 4 |
| 100. | ದಶರಥನು ರಾಮನನ್ನು ಕಳುಹಿಸಲು ಒಪ್ಪದಿದ್ದಾಗ ವಿಶ್ವಾಮಿತ್ರರ ಪರಿಸ್ಥಿತಿ ಹೇಗಿತ್ತು ? | ಬೆಂಕಿಯಂತೆ ಪ್ರಜ್ವಲಿಸುತ್ತಿದ್ದರು | 20 | 4 |
| 101. | ವಿಶ್ವಾಮಿತ್ರರು ಕೋಪಗೊಂಡಾಗ ವಸಿಷ್ಠರು ದಶರಥನಿಗೆ ಏನು ಹೇಳಿದರು ? | ಅವರ ಬಯಕೆಯನ್ನು ಪೂರೈಸುತ್ತೇನೆ ಎಂದು ಮಾತು ಕೊಟ್ಟು ಮೀರುವುದು ಸರಿಯಲ್ಲ | 21 | 4 |
| 102. | ಶ್ರೀರಾಮ ಕೋಪಗೊಂಡರೆ ಏನಾಗಬಹುದು ? | 14 ಲೋಕಗಳು ಸುಡಬಲ್ಲವು<br>* ವಾಸ್ತವಿಕವಾಗಿ ಭಗವಂತನಿಗೆ ಕೋಪ ಎಂಬ ದೋಷ ಇಲ್ಲ. | 23 | 4 |
| 103. | ಜಯ ಸುಪ್ರಭಾ ಎಂಬ ದಕ್ಷಕನ್ಯೆಯಿಂದ ಪ್ರಕಟಗೊಂಡ ನೂರಾರು ಅಸ್ತ್ರಗಳನ್ನು ತಿಳಿದವರು ಯಾರು ? | ವಿಶ್ವಾಮಿತ್ರರು | 25 | 4 |
| 104. | ದಶರಥ ರಾಮ–ಲಕ್ಷ್ಮಣರನ್ನು ಕಳುಹಿಸಿಕೊಡಲು ಕಾರಣ? | ವಶಿಷ್ಠರ ಮಾರ್ಗದರ್ಶನ<br>* ವಶಿಷ್ಠ = ದಶರಥನ ಆಚಾರ್ಯರು | 27 | 4 |
| 105. | ಸರಯೂ ನದಿಯನ್ನು ದಾಟಿದ ವಿಶ್ವಾಮಿತ್ರರು ರಾಮನಿಗೆ ಏನು ಹೇಳಿದರು? | ಬಲಾ–ಅತಿಬಲಾ ಎಂಬ ಎರಡು ಮಂತ್ರಗಳನ್ನು ನೀಡುವೆ ಎಂದು ಹೇಳಿದರು | 31 | 4 |
| 106. | ವಿಶ್ವಾಮಿತ್ರರಿಗೆ ಬಲಾ–ಅತಿಬಲಾ ಎಂಬ ಎರಡು ಮಂತ್ರಗಳನ್ನು ನೀಡಿದವರು ಯಾರು ? | ಬ್ರಹ್ಮ ದೇವರು | 31 | 4 |
| 107. | ಬಲಾ–ಅತಿಬಲಾ ಎಂಬ ಮಂತ್ರಗಳ ಸಾಮರ್ಥ್ಯವೇನು ? | ಹಸಿವು ಬಾಯಾರಿಕೆ ಮೊದಲಾದವುಗಳನ್ನು ನೀಗಿಸುತ್ತದೆ | 31 | 4 |
| 108. | ಸರ್ವಜ್ಞನಾದ ಭಗವಂತನು ವಿಶ್ವಾಮಿತ್ರರಿಂದ ಮಂತ್ರೋಪದೇಶವನ್ನು ಏಕೆ ಪಡೆದನು ? | ವಿದ್ಯೆಯನ್ನು ಗುರುಗಳಿಂದಲೇ ಪಡೆಯಬೇಕು ಎಂಬ ಶಿಷ್ಟಾಚಾರವನ್ನು ಲೋಕಕ್ಕೆ ತಿಳಿಸಲು | 32 | 4 |
| 109. | ಸರಯು–ಗಂಗಾ ನದಿ ಸಂಗಮದ ಬಳಿ ರಾಮ ಲಕ್ಷ್ಮಣರು ಎಲ್ಲಿ ತಂಗಿದರು? | ಅನಂಗನ ಆಶ್ರಮದಲ್ಲಿ | 34 | 4 |
| 110. | ಅನಂಗ ಎಂದರೆ ಯಾರು? | ಮನ್ಮಥ | | 4 |
| 111. | ಆ ಆಶ್ರಮಕ್ಕೆ ಅನಾಂಗಾಶ್ರಮ ಎಂಬ ಹೆಸರು ಬರಲು ಕಾರಣ ? | ರುದ್ರದೇವರ ದೃಷ್ಟಿಯ ಜ್ವಾಲೆಯಿಂದ ಮನ್ಮಥನು ತನ್ನ ಅಂಗಗಳನ್ನು ಈ ಸ್ಥಳದಲ್ಲಿ ಕಳೆದುಕೊಂಡ ಕಾರಣ | 35 | 4 |
| 112. | ಗಂಗಾ ನದಿಯನ್ನು ದಾಟಿದ ರಾಮ ಲಕ್ಷ್ಮಣರಿಗೆ ಯಾವ ಸ್ಥಳ ಎದುರಾಯಿತು?<br>ಆ ವನಕ್ಕೆ ಮೊದಲು ಇದ್ದ ಹೆಸರೇನು? ಹಾಗೆಯೇ ಆ ದೇಶ ಯಾರ ಅನುಗ್ರಹದಿಂದ ಅಭಿವೃದ್ಧಿಗೊಂಡಿತ್ತು ? | ಘೋರವಾದ ಅರಣ್ಯ ತಾಟಕಾವನ<br>ಕರುಷ ದೇಶ<br>ಇಂದ್ರನ ಅನುಗ್ರಹದಿಂದ | 36–40 | 4 |
| 113. | ತಾಟಕೆಯ ತಂದೆ, ಗಂಡ, ಮಗ ಯಾರು?<br>ತಾಟಕೆಗೆ ಯಾವ ರೀತಿಯ ಬಲವಿತ್ತು ? | ಸುಕೇತು ಎಂಬ ಯಕ್ಷ, ಸುಂದ, ಮಾರೀಚ.<br>ಬ್ರಹ್ಮದೇವರ ಅವಧ್ಯತ್ವ ವರಬಲದಿಂದ 10,000 ಆನೆಯ ಬಲವನ್ನು ಹೊಂದಿದ್ದಳು. | 40–42 | 4 |
| 114. | ತಾಟಕೆಗೆ ರಾಕ್ಷಸ ರೂಪ ಬರಲು ಕಾರಣವೇನು ? | ಅಗಸ್ತ್ಯರ ಶಾಪದಿಂದ | 42 | 4 |
| 115. | ರಾಕ್ಷಸ ರೂಪವನ್ನು ಪಡೆದ ತಾಟಕೆ ದಯೆ ಇಲ್ಲದೆ ಏನು ಮಾಡುತ್ತಿದ್ದಳು ? | ಗೋವುಗಳನ್ನು ಬ್ರಾಹ್ಮಣರನ್ನು ತಿನ್ನುತ್ತಿದ್ದಳು | 43 | 4 |
| 116. | ತಾಟಕಾವನದಲ್ಲಿ ವಿಶ್ವಾಮಿತ್ರರು ರಾಮ ಲಕ್ಷ್ಮಣರಿಗೆ ಏನನ್ನು ತೋರಿಸಿದರು ? | ತಾಟಕೆಯು ತಿಂದುಳಿದ ಗೋವುಗಳ ಬ್ರಾಹ್ಮಣರ ತಲೆ ಬುರುಡೆ ಮೂಳೆಗಳ ರಾಶಿಯನ್ನು | 43 | 4 |
| 117. | ಶ್ರೀ ರಾಮನು ಧನುಸ್ಸಿನ ಹಿಂಕಾರವನ್ನು ಮಾಡಿದಾಗ ತಾಟಕೆಗೆ ಏನಾಯಿತು ? | ಅವಳ ಕರ್ಣಬಿಲ ಸುಟ್ಟು ಹೋಯಿತು | 45 | 4 |
| 118. | ತಾಟಕೆ ದೊಡ್ಡಬಾಯನ್ನು ತೆರೆದಿಟ್ಟುಕೊಂಡು ರಾಮನಲ್ಲಿಗೆ ಎರಗಿದಾಗ ಶ್ರೀರಾಮ ಹೇಗಿದ್ದ ? | ಯಾವುದಕ್ಕೂ ಕೆಂಗಡದೇ ಧೈರ್ಯವಾಗಿ ನಿಂತಿದ್ದ | 47 | 4 |
| 119. | ಮಾಯಾವಿಯಾದ ತಾಟಕೆಯು ಶ್ರೀರಾಮನ ಮೇಲೆ ಧೂಳಿನ, ಶಿಲೆಗಳ ರಾಶಿಗಳನ್ನು ಸುರಿದಾಗ ಶ್ರೀರಾಮ ಏನು ಮಾಡಿದ ? | ಅವಳ ಕೈಗಳನ್ನು ಕತ್ತರಿಸಿದ | 49 | 4 |
| 120. | ಲಕ್ಷ್ಮಣ ತಾಟಕೆಗೆ ಏನು ಮಾಡಿದ | ಅವಳ ತುಟಿ ಮೂಗುಗಳನ್ನು ಸೀಳಿದ | 50 | 4 |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 121. | ಲಕ್ಷ್ಮಣನು ತಾಟಕೆಯನ್ನು ಆಕ್ರಮಿಸಿದಾಗ ಅವಳು ಏನು ಮಾಡಿದಳು ? | ಅದೃಶ್ಯಳಾಗಿ ಶಸ್ತ್ರಗಳ ಮಳೆಯನ್ನು ಸುರಿದಳು | 50 | 4 |
| 122. | ರಾಮ ತಾಟಕೆಯನ್ನು ಕೊಲ್ಲಲು ಏಕೆ ಹಿಂಜರದ ? | ಸ್ತ್ರೀಯರನ್ನು ಹಿಂಸಿಸುವುದು ತರವಲ್ಲ ಎಂಬುದಕ್ಕೆ | | 4 |
| 123. | ತಾಟಕೆಯನ್ನು ಸ್ತ್ರೀ ಎಂಬ ಕಾರಣದಿಂದಾಗಿ ಕೊಲ್ಲದಿದ್ದಲ್ಲಿ ಏನಾಗುತ್ತಿತ್ತು? | ಲೋಕದಲ್ಲಿ ಅನೇಕ ಸಜ್ಜನರ ಸಂಹಾರ ಆಗುತ್ತಿತ್ತು. | | 4 |
| 124. | ಸ್ತ್ರೀ ಒದೆಗೆ ಸಂಕೋಚ ಪಟ್ಟ ಶ್ರೀರಾಮನಿಗೆ ವಿಶ್ವಾಮಿತ್ರರು ಏನು ಹೇಳಿದರು ? | ಈ ದುಷ್ಟಳನ್ನು ಕೊಲ್ಲು–ಕೊಲ್ಲು | 51 | 4 |
| 125. | ತಾಟಕೆಯನ್ನು ಶ್ರೀರಾಮ ಹೇಗೆ ಕೊಂದ ? | ತನ್ನ ಬಾಣದಿಂದ ಎದೆಗೆ ಪ್ರಹಾರ ಮಾಡಿ | 53 | 4 |
| 126. | ತಾಟಕೆಯನ್ನು ಸಂಹರಿಸಿದ ಶ್ರೀರಾಮ ಮೇಲೆ ಯಾರು ಪುಷ್ಪವೃಷ್ಟಿಯನ್ನು ಸುರಿಸಿದರು? | ದೇವತೆಗಳ ಗುಂಪು | 54 | 4 |
| 127. | ಸರ್ವಜ್ಞನಾದ ಶ್ರೀರಾಮನಿಗೆ ವಿಶ್ವಾಮಿತ್ರರು ಏಕೆ ಉಪದೇಶಿಸಿದರು? | ಬ್ರಾಹ್ಮಣನ ಕರ್ತವ್ಯ | 3 | 5 |
| 128. | ಗಾಧಿಯ ಮಗ ಯಾರು? | ವಿಶ್ವಾಮಿತ್ರರು. | 7 | 5 |
| 129. | ಅಸ್ತ್ರಾಭಿಮಾನಿ ದೇವತೆಗಳು ಶ್ರೀರಾಮನಿಗೆ ಏನು ಹೇಳಿದರು? | ನಾವು ನಿನ್ನ ಸೇವಕರು | 4 | 5 |
| 130. | ಅದಿತಿ ಕಶ್ಯಪರ ಮಗನಾಗಿ ಅವತರಿಸಿದ ದೇವರು ಯಾರು? | ವಾಮನ | 9 | 5 |
| 131. | ವಿವಸ್ವಾನನ (ಸೂರ್ಯ) ತಾಯಿ ಯಾರು? | ಅದಿತಿ | 26 | 5 |
| 132. | ವಿವಸ್ವಾನನ ಮಗನಾದ ಮನುವು ಯಾರು? | ಶ್ರಾದ್ಧದೇವ | 27 | 5 |
| 133. | ಶ್ರಾದ್ಧದೇವನ ವಂಶದಲ್ಲಿ ಬಂದ ರಾಜ ಶ್ರೇಷ್ಟರು ಯಾರು? | ಇಕ್ಷ್ವಾಕುವೇ ಮೊದಲಾದವರು. | 27 | 5 |